Prepp
Your Personal Exams Guide

Language Code : **07**

इस पुस्तिका में **20** मुद्रित पृष्ठ हैं।
This booklet contains **20** Printed pages.

# FSC-26-II

**प्रश्न-पत्र-II / PAPER-II**
**कन्नड़ भाषा परिशिष्ट**
**Kannada Language Supplement**
**भाग-IV & V / PART-IV & V**

मुख्य परीक्षा पुस्तिका संख्या / Main Test Booklet No.

मुख्य परीक्षा पुस्तिका कोड / Main Test Booklet Code
**J**

**इस परीक्षा पुस्तिका को तब तक न खोलें जब तक कहा न जाए।**
**Do not open this Test Booklet until you are asked to do so.**
**इस परीक्षा पुस्तिका के पिछले आवरण (पृष्ठ 19 व 20) पर दिए निर्देशों को ध्यान से पढ़ें।**
**Read carefully the Instructions on the Back Cover (Page 19 & 20) of this Test Booklet.**

**कन्नड़ में निर्देशों के लिए इस पुस्तिका का पृष्ठ 2 देखें। / FOR INSTRUCTIONS IN KANNADA SEE PAGE 2 OF THIS BOOKLET.**

## परीक्षार्थियों के लिए निर्देश

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो **या** तो भाग IV (भाषा I) **या** भाग V (भाषा II) **कन्नड़** भाषा में देना चाहते हैं, लेकिन **दोनों नहीं**।
2. परीक्षार्थी भाग I एवं भाग II **या** III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग IV व भाग V के अन्तर्गत दिए गए हैं। भाषा परिशिष्टों को आप अलग से माँग सकते हैं।
4. इस पृष्ठ पर विवरण अंकित करने एवं OMR उत्तर पत्र पर निशान लगाने के लिए **केवल काले/नीले बॉल पॉइंट पेन** का प्रयोग करें।
5. इस भाषा पुस्तिका का **संकेत** है **J**। यह सुनिश्चित कर लें कि इस भाषा परिशिष्ट पुस्तिका का संकेत, OMR उत्तर पत्र के **पृष्ठ-2** एवं मुख्य परीक्षा पुस्तिका पर छपे संकेत से मिलता है। अगर यह भिन्न हो, तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं, जो प्रत्येक 1 अंक का है :
   भाग-IV : भाषा-I (कन्नड़) (प्र. 91 से प्र. 120)
   भाग-V : भाषा-II (कन्नड़) (प्र. 121 से प्र. 150)
7. भाग-IV में भाषा-I के लिए 30 प्रश्न और भाग-V में भाषा-II के लिए 30 प्रश्न दिए गए हैं। इस परीक्षा पुस्तिका में केवल कन्नड़ भाषा से संबंधित प्रश्न दिए गए हैं। **यदि भाषा-I और/या भाषा-II में आपके द्वारा चुनी गई भाषा(एँ) कन्नड़ के अलावा है तो कृपया उस भाषा वाली परीक्षा पुस्तिका माँग लीजिए। जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिए।**
8. **परीक्षार्थी भाग-V (भाषा-II) के लिए, भाषा सूची से ऐसी भाषा चुनें जो उनके द्वारा भाषा-I (भाग-IV) में चुनी गई भाषा से भिन्न हो।**
9. रफ कार्य परीक्षा पुस्तिका में इस प्रयोजन के लिए दी गई खाली जगह पर ही करें।
10. सभी उत्तर केवल OMR उत्तर पत्र पर ही अंकित करें। अपने उत्तर ध्यानपूर्वक अंकित करें। उत्तर बदलने हेतु श्वेत रंजक का प्रयोग निषिद्ध है।

## INSTRUCTIONS FOR CANDIDATES

1. This booklet is a supplement to the Main Test Booklet for those candidates who wish to answer **EITHER** Part IV (Language I) **OR** Part V (Language II) in **KANNADA** language, but **NOT BOTH**.
2. Candidates are required to answer Part I and Part II **OR** III from the Main Test Booklet and Parts IV and V from the languages chosen by them.
3. Questions on English and Hindi languages for Part IV and Part V have been given in the Main Test Booklet. Language Supplements can be asked for separately.
4. Use **Black/Blue Ball Point Pen only** for writing particulars on this page/ marking responses in the OMR Answer Sheet.
5. The CODE for this Language Booklet is **J**. Make sure that the CODE printed on **Side-2** of the OMR Answer Sheet and on your Main Test Booklet is the same as that on this Language Supplement Test Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **two** Parts, IV and V, consisting of **60** Objective Type Questions, each carrying 1 mark :
   Part-IV : Language-I (Kannada) (Q. 91 to Q. 120)
   Part-V : Language-II (Kannada) (Q. 121 to Q. 150)
7. Part-IV contains 30 questions for Language-I and Part-V contains 30 questions for Language-II. In this Test Booklet, only questions pertaining to Kannada language have been given. **In case the language/s you have opted for as Language-I and/or Language-II is a Language other than Kannada, please ask for a Test Booklet that contains questions on that language. The language being answered must tally with the languages opted for in your Application Form.**
8. **Candidates are required to attempt questions in Part-V (Language-II) in a language other than the one chosen as Language-I (in Part-IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

परीक्षार्थी का नाम (बड़े अक्षरों में) : ______________________
Name of the Candidate (in Capitals) :

अनुक्रमांक : (अंकों में) / Roll Number : in figures ______________________
: शब्दों में / in words ______________________

परीक्षा केन्द्र (बड़े अक्षरों में) : ______________________
Centre of Examination (in Capitals) :

परीक्षार्थी के हस्ताक्षर : ______________ निरीक्षक के हस्ताक्षर : ______________
Candidate's Signature : Invigilator's Signature :

Facsimile Signature Stamp of
Centre Superintendent : ______________________

Prepp
Your Personal Exams Guide

Language Code : **07**

ಈ ಪ್ರಶ್ನೆ ಪುಸ್ತಿಕೆ 20 ಪುಟಗಳನ್ನು ಹೊಂದಿರುತ್ತದೆ.

# FSC-26-II

## ಪ್ರಶ್ನೆ ಪತ್ರಿಕೆ–II
## ಕನ್ನಡ ಭಾಷಾ ಪೂರಕ
### ಭಾಗ IV ಮತ್ತು V

ಪ್ರಶ್ನೆ ಪುಸ್ತಿಕೆ ಸಂಕೇತ

**J**

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.**
**ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 ಮತ್ತು 20) ಗಮನವಿಟ್ಟು ಓದಿರಿ.**
**ಪರೀಕ್ಷಾರ್ಥಿಗಳಿಗೆ ಸೂಚನೆಗಳು :**

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ IV (ಭಾಷೆ I) **ಅಥವಾ** ಭಾಗ V (ಭಾಷೆ II)ನ್ನು **ಕನ್ನಡ** ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು **ಎರಡನ್ನೂ ಅಲ್ಲ.**
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I, II ಮತ್ತು III ನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು V ರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಮತ್ತು ಭಾಗ V ರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು **ಕೇವಲ ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್** ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ **ಸಂಕೇತ J** ಆಗಿದೆ. OMR ಉತ್ತರ ಪತ್ರಿಕೆಯ **ಪುಟ–2** ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ OMR ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ **ಎರಡು** ಭಾಗಗಳಿವೆ ಭಾಗ IV ಮತ್ತು V, ಇದರಲ್ಲಿ **60** ವಸ್ತುನಿಷ್ಠ ಪ್ರಶ್ನೆಗಳಿವೆ, ಅವುಗಳಿಗೆ ಪ್ರತಿಯೊಂದಕ್ಕೂ **1** ಅಂಕ.
   ಭಾಗ–IV : ಭಾಷಾ I – (ಕನ್ನಡ) (ಪ್ರಶ್ನೆ 91 ರಿಂದ 120)
   ಭಾಗ–V : ಭಾಷಾ II – (ಕನ್ನಡ) (ಪ್ರಶ್ನೆ 121 ರಿಂದ 150)
7. ಭಾಗ–IV ರಲ್ಲಿ ಭಾಷೆ–I ಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ–V ರಲ್ಲಿ ಭಾಷೆ–II ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. **ಒಂದು ವೇಳೆ ಭಾಷೆ–I ಮತ್ತು/ಅಥವಾ ಭಾಷೆ–II ರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು – ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.**
8. **ಪರೀಕ್ಷಾರ್ಥಿ ಭಾಗ–V (ಭಾಷೆ–II) ಕ್ಕಾಗಿ, ಭಾಷೆ–I (ಭಾಗ–IV) ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.**
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ (OMR) ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ (Whitener) ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) : ______________________

ಕ್ರಮ ಸಂಖ್ಯೆ : (ಅಂಕೆಗಳಲ್ಲಿ) : ______________________

: (ಅಕ್ಷರಗಳಲ್ಲಿ) : ______________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ) : ______________________

ಪರೀಕ್ಷಾರ್ಥಿಯ ಸಹಿ : ______________ ನಿರೀಕ್ಷಕರ ಸಹಿ : ______________

Facsimile signature stamp of
Centre Superintendent : ______________________

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–I** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–IV** ರಲ್ಲಿರುವ ಪ್ರಶ್ನೆಗಳನ್ನು **(ಪ್ರಶ್ನೆ ಸಂಖ್ಯೆ 91 - 120)** ಉತ್ತರಿಸಬೇಕು.

Candidates should attempt the questions from **Part-IV (Q.No. 91-120)**, if they have opted **KANNADA** as **Language-I** only.

Prepp
Your Personal Exams Guide

## PART-IV

## LANGUAGE-I

## KANNADA

| |
|---|
| ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–I** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–IV** ರಲ್ಲಿರುವ ಪ್ರಶ್ನೆಗಳನ್ನು (**ಪ್ರಶ್ನೆ ಸಂಖ್ಯೆ** 91 - 120) ಉತ್ತರಿಸಬೇಕು. |

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 91-99) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ನಾನು ಸರಕಾರಿ ನೌಕರಿಯನ್ನು ಮೊದಲು ಕೈಗೊಂಡದ್ದು ಉಪಾಧ್ಯಾಯನಾಗಿ, ಕಡೆಗೆ ಕೆಳಗಿಟ್ಟದ್ದು ಉಪಾಧ್ಯಾಯನಾಗಿ; ಇವೆರಡರ ನಡುವೆ ಮಾತ್ರ ಚಿಕ್ಕದೊಂದು ಅವಧಿಯು ಕಡುಬಿನೊಳಗಣ ಹೂರಣದಂತೆ ಮಧ್ಯಸ್ಥವಾಗಿತ್ತು. ಈ ಕಾಲಾವಧಿಯ ಹದಿನಾಲ್ಕು ವರ್ಷಗಳಲ್ಲಿ ನಾನು ನಮ್ಮ ಜಿಲ್ಲೆಯ ಗ್ರಾಮಗಳನ್ನು ಸುತ್ತಾಡಿ ಹಳ್ಳಿಯ ಶಾಲೆಗಳನ್ನು ನೋಡಿದ ವೇಳೆ ನನ್ನ ಲಕ್ಷ್ಯಕ್ಕೆ ಬಂದಿದ್ದ ಹಳ್ಳಿಯವರ ರೀತಿ, ಅಯ್ಯಗಳ ಚರ್ಯೆ, ಮಕ್ಕಳ ಮಾತು, ಇವನ್ನು ನನ್ನ ಮನಸ್ಸು ಈಗಲೂ ನೆನವರಿಸಿ – ಮುಪ್ಪಿನ ಮೇಬಳ್ಳಿಗೆ ಸಿಲುಕಿ ಬಿದ್ದಲ್ಲೇ ಬಿದ್ದುಕೊಂಡಿದ್ದರೂ – ಆ ನೆನಹುಗಳನ್ನು ಮತ್ತು ಈಚೆಗೆ ತಂದು ಮೆಲುಕಾಡುವುದಕ್ಕೆ ಬಯಸುತ್ತಿದೆ.

ನನ್ನ ಸರ್ವಿಸ್ ಜಾತಕದ ಮೇರೆಗೆ ನನಗೆ ಮಂಗಳೂರು ಗವರ್ನಮೆಂಟ್ ಕಾಲೇಜಿನಲ್ಲಿ ಹನ್ನೊಂದು ವರ್ಷಗಳ ತನಕ ಹಿಡಿದಿದ್ದ ಅಧ್ಯಾಪಕನ ಸ್ಥಿರಗತಿ ತಪ್ಪಿ, 1906ರಲ್ಲಿ ಗ್ರಾಮಸಂಚಾರದ ಗ್ರಹಗತಿ ಪ್ರಾಪ್ತವಾಯಿತು. ಅದೇ ವರ್ಷ ಗ್ರಾಮ ಶಾಲೆಗಳ ವಿಚಾರವೇದಿಕೆಗೆ ಇದ್ದ 'ಡೆಪ್ಯುಟಿ ಇನ್ಸ್‌ಪೆಕ್ಟರ್' ಎಂಬ ಹಳೆಯ ಹೆಸರು ಹೋಗಿ. 'ಸಬ್ ಎಸಿಸ್ಟಾಂಟ್' ಎಂದು ಹೊಸ ನಾಮಕರಣವಾಯಿತು. ಇದರಿಂದ ಆ ಪದವಿಯ ಮಾನಮನ್ನಣೆಗೆ ಬಹುಶಃ ಯಾವ ಕೊರತೆಯೂ ಬಂದಿರಲಿಲ್ಲ. ಮನ್ನಣೆ ಕಡಿಮೆಯಾದದ್ದು ಇದ್ದರೆ, ಅದು ಜಾಗದ ಹೆಸರಿನ ಬದಲಾವಣೆಯಿಂದಲ್ಲ; ಅದರ ಕಾರಣವೇ ಬೇರೆ. ಹಿಂದಕ್ಕೆ ಗುತ್ತಿನ ಪಟೇಲಿಕೆ, ಗ್ರಾಮದ ಶ್ಯಾನುಭೋಗಿಕೆ, ತಾಲ್ಲೂಕು ಗುಮಾಸ್ತಿಕೆ, ಪೋಲೀಸ್ ಕೈದುಗಾರಿಕೆ ಹೀಗೆ ಜುಜಿಬಿ ಸರಕಾರ ಕೆಲಸಕ್ಕೆ ಪ್ರಾಯ್ಮರಿ ಪರೀಕ್ಷೆಯ ಪಾಸು ಪಡಿಯಲೇಬೇಕಾಗಿತ್ತು. 1904ರಲ್ಲಿ 'ಇಂದಿನಿಂದ ಈ ಪ್ರಾಯ್ಮರಿ ಪರೀಕ್ಷೆ ವಜಾ ಆಗಿದೆ, ಪಾಸಿನ ಪ್ರಸಾದದಿಂದ ಫಲವಿಲ್ಲ' ಎಂದು ಸರಕಾರದ ನುಡಿಕಟ್ಟಾಯಿತು; ಇದರಿಂದ ಸರ್ಟಿಫಿಕೇಟಿನ ಪ್ರಭಾವವು ನಿಂತುಹೋಗಿ, ಶಾಲಾ ಇಲಾಖೆಯವರು ಹಳ್ಳಿಯ ಮಕ್ಕಳಿಗೆ ಹಂಚುತ್ತಲಿದ್ದ ಶ್ರೀಮುಡಿ ಗಂಧಪ್ರಸಾದದ ಮೇಲೆ ಹಳ್ಳಿಯವರಿಗಿದ್ದ ಪೂರ್ವದ ಭಕ್ತಿವಿಶ್ವಾಸಗಳು ಕಡಿಮೆಯಾದವು.

ನಾನು 'ಸಬ್ ಎಸಿಸ್ಟಾಂಟನ' ಸ್ಥಳದಲ್ಲಿ ಕಾಲಿಟ್ಟಾಗ ಹಳ್ಳಿಯ ಉಪಾಧ್ಯಾಯರ ಹಿಂದಿನ ಹಲವು ಸಂಪ್ರದಾಯಗಳು ಉದುರಿ ಹೋಗಿ, ಹೂವಿನ ಎಡೆಯಲ್ಲಿ ಒಣಎಲೆ ಮಾತ್ರವೇ ಉಳಿದಿತ್ತು. ಮರ್ಯಾದೆಯಲ್ಲಿ ಹಿಂದಿನಷ್ಟು ವಿಜೃಂಭಣೆ ಇಲ್ಲ. ಮುಂಚೆ ಕೊಂಬು, ಕಹಳೆ ಇರುವಲ್ಲಿ ಈಗ ಕೈಮುಗಿತ, ನಜರು ಕಾಣಿಕೆ ಕೊಡುವಲ್ಲಿ ಎಳನೀರು. 'ಸ್ವಾಮೀ! ದೇವ್ರು!' ಎಂದು ಸಂಬೋಧಿಸುವಲ್ಲಿ 'ಹೌದು ಸರ್, ಇಲ್ಲ ಸಾರ್'– ಇಷ್ಟಕ್ಕೆ ಇಳಿದಿತ್ತು. 'ಈಗ ಶಾಲೆಯವರಿಗೆ ಹಳ್ಳಿಯಲ್ಲಿ ಮುಂಚಿನ ಭರಮು ಇಲ್ಲ. ಸೆರ್! ಪ್ರಾಯ್ಮರಿ ಇದ್ದಾಗ ಕೈತುಂಬಾ ಗ್ರೇಂಟ್ ಹಣ ಹಂಚುತ್ತಿದ್ದರು; ಮರ್ಯಾದೆಯೂ ಬರುತಿತ್ತು. ಈಗ ಹೆಸರು ಮಾತ್ರ ದೊಡ್ಡದು–ಸಬ್ ಅಶಿಶ್ಟಾಂಟ್ ಇನ್ಸ್‌ಪೇಟರ್! ಯಾರು ಮೂಸುತ್ತಾರೆ! ಯಾರು ಮೂಸುತ್ತಾರೆ, ಶೆರ್?' ಈ ರೀತಿಯ ಉಪಾಧ್ಯಾಯರ ಅಭಿಪ್ರಾಯವನ್ನೇ ಹಳ್ಳಿಯ ದೊಡ್ಡ ಮನುಷ್ಯರೊಬ್ಬರು ನನ್ನ ಮುಂದೆ ಕಾರ್ಯರೂಪವಾಗಿ ಮಾಡಿ ತೋರಿಸಿದ ಸಂಗತಿ ನನ್ನ ನೆನಪಿನಲ್ಲಿದೆ.

**91.** 'ನಜರು' ಈ ಪದದ ಮೂಲ :

(1) ಅರಬಿ (2) ಹಿಂದಿ (3) ಉರ್ದು (4) ಸಂಸ್ಕೃತ

**92.** 'ಕೈಗೊಳ್ಳು' – ಈ ಪದದ ಅರ್ಥ :

(1) ಕೈಗೆ ಬಂದಿರುವುದು (2) ಮಾಡು (3) ಕೈ ಕೆಲಸ (4) ಕೈಯಲ್ಲಿ ಹಿಡಿ

93. 'ಮುಪ್ಪಿನ ಮೇಬಳ್ಳಿಗೆ ಸಿಲುಕಿ ಬಿದ್ದಲ್ಲೇ ಬಿದ್ದುಕೊಂಡಿದ್ದರೂ' ಈ ವಾಕ್ಯವನ್ನು ವಿವರಿಸಿ.
(1) ಮೇಲಿನ ಮುಪ್ಪಾದ ಬಳ್ಳಿಗೆ ಸಿಕ್ಕುಹೋಗು
(2) ವಯಸ್ಸಿನಿಂದ ಓಡಾಡಲು ಆಗದಿದ್ದರೂ
(3) ಮುಪ್ಪಿನಿಂದ ಬಳ್ಳಿಯಲ್ಲಿ ಸಿಕ್ಕಿಕೊಂಡಿದ್ದರೂ
(4) ಮೇಲಿನ ಬಳ್ಳಿಗೆ ಸಿಕ್ಕು ಎಡವಿ ಬಿದ್ದರೂ

94. ಈಗ ಮನಸ್ಸು ಏನನ್ನು ನೆನೆಸಿಕೊಳ್ಳುತ್ತಿದೆ ?
(1) ಹಿಂದೆ ನಡೆದ ಘಟನೆಗಳನ್ನು
(2) ತನ್ನ ಯೌವನದ ದಿನಗಳನ್ನು
(3) ಹಳ್ಳಿಯವರ ರೀತಿ, ಮಕ್ಕಳ ಮಾತು
(4) ಹಳ್ಳಿಯಲ್ಲಿ ಕಳೆದ ಬಾಲ್ಯ

95. 'ಪ್ರಾಯ್ಮರಿ' ಪರಿಕ್ಷೇಯ ಕಥೆ ಏನು ?
(1) ಕೆಲಸಕ್ಕೆ ಕಾರಣವಾದ ಪದವಿ
(2) ಮೊದಲು ಕೆಲಸಕ್ಕೆ ಕಾರಣವಾಗಿ ನಂತರ ತನ್ನ ಪ್ರಸ್ತುತತೆ ಕಳೆದುಕೊಂಡಿರುವುದು
(3) ಪ್ರಾಥಮಿಕ ಪದವಿಯ ಹೆಸರು
(4) ಚಿಕ್ಕಮಕ್ಕಳ ಪರೀಕ್ಷೆಯ ಕಥೆ

96. 'ಗವರ್ನಮೆಂಟ್' – ಈ ಪದ ಎಲ್ಲಿಂದ ಬಂದಿದ್ದು ?
(1) ಇಂಗ್ಲಿಷ್
(2) ಡಚ್
(3) ಫ್ರೆಂಚ್
(4) ಸಂಸ್ಕೃತ

97. 'ಉಪಾಧ್ಯಾಯ' – ಈ ಪದದ ಮೂಲ :
(1) ಹಿಂದಿ
(2) ಕನ್ನಡ
(3) ಪ್ರಾಕೃತ
(4) ಸಂಸ್ಕೃತ

98. 'ಹೂವಿನ ಎಡೆಯಲ್ಲಿ ಒಣ ಎಲೆ ಮಾತ್ರ ಉಳಿದಿದೆ' – ಈ ಮಾತು ಯಾವ ಭಾವವನ್ನು ಸೂಚಿಸುತ್ತಿದೆ.
(1) ಸಂಪತ್ತು ಇಲ್ಲವಾಗಿರುವುದು
(2) ಎಳೆತನ ಹೋಗಿ ಮುಪ್ಪು ಬಂದಿರುವುದು
(3) ಸುಂದರವಾಗಿದ್ದದ್ದು ಅದನ್ನು ಕಳೆದುಕೊಂಡಿದ್ದು
(4) ಹೂವು ಪಕ್ವವಾಗಿದ್ದು

99. 'ಕಡೆಗೆ ಕೆಳಗಿಟ್ಟಿದ್ದು' – ಈ ವಾಕ್ಯಭಾಗದ ಇಲ್ಲಿನ ಅರ್ಥ :
(1) ಕೊನೆಯಲ್ಲಿ ಕೆಳಗೆ ಕೂತದ್ದು
(2) ಕೆಳಗೆ ಇಡು
(3) ನಿವೃತ್ತಿಯಾದದ್ದು
(4) ಮೂಲೆಯಲ್ಲಿ ಇಟ್ಟಿದ್ದು

**ನಿರ್ದೇಶನ : ಈ ಕೆಳಗಿನ ಕವನವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 100-105) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಒಡಲುಗೊಂಡವ ಹಸಿವ
ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ !
ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ.

**100.** 'ಜಡಿದು' – ಈ ಪದದ ಅರ್ಥ :

(1) ಹೊಡೆದು (2) ಪ್ರೀತಿಯಿಂದ (3) ಗದರಿಸಿ (4) ಜೋರಾಗಿ

**101.** 'ಜಡಿದೊಮ್ಮೆ' ಪದವನ್ನು ಬಿಡಿಸಿ.

(1) ಜಡಿ+ದೊಮ್ಮೆ (2) ಜ+ಡಿ+ದೊಮ್ಮೆ
(3) ಜಡಿದು+ಒಮ್ಮೆ (4) ಜಡಿ+ದ್+ಒಮ್ಮೆ

**102.** ರಾಮನಾಥನಿಗೆ ಏನನ್ನು ಸವಾಲು ಹಾಕಲಾಗಿದೆ ?

(1) ನನ್ನ ಹಾಗೆ ದೇಹ ಹೊಂದಿ ನೋಡು ಎಂದು
(2) ನನ್ನ ಹಾಗೆ ಸುಳ್ಳು ಹೇಳು ಎಂದು
(3) ನನ್ನ ಹಾಗೆ ಹಸಿದು ನೋಡು ಎಂದು
(4) ನನ್ನ ಹಾಗೆ ಭಕ್ತಿ ತೋರು ಎಂದು

**103.** 'ಒಡಲುಗೊಂಡವ' – ಈ ಪದದ ಅರ್ಥ :

(1) ದೇಹದ ಪ್ರಾಮುಖ್ಯತೆ ಮೀರಿದವ
(2) ದೇಹದ ಇಚ್ಛೆಗೆ ಅಧೀನವಾದವ
(3) ದೇಹವನ್ನು ಪಡೆದವ
(4) ಹಸಿವಿನಿಂದ ಕೂಡಿದವ

**104.** 'ಏನನ್ನು ಹೇಳಬೇಡ' ಎಂದು ಇಲ್ಲಿ ಹೇಳಲಾಗಿದೆ ?

(1) ಸುಳ್ಳು ಹೇಳುತ್ತ ಬಲಿಯಾಗಬೇಡ ಎಂದು ಹೇಳಲಾಗಿದೆ
(2) ದೇಹಕ್ಕೆ ಪ್ರಾಮುಖ್ಯತೆ ಕೊಡು ಎಂದು ಹೇಳಬೇಡ
(3) ದೇಹವಿರುವವನನ್ನು ದೇಹಬಿಡು ಎಂದು ಹೇಳಬೇಡ
(4) ಹಸಿದವನನ್ನು ಸುಳ್ಳು ಹೇಳುವವನು ಎಂದು ಹೇಳಬೇಡ

**105.** ಒಟ್ಟು ಸತ್ವದ ಆಶಯವೇನು ?

(1) ಪರಮಾರ್ಥವನ್ನು ವಿವರಿಸಲಾಗಿದೆ
(2) ದೇಹದ ಗುಣಧರ್ಮವನ್ನು ಹೇಳಲಾಗಿದೆ
(3) ದೇಹ ದಂಡನೆಯ ವಿವರಣೆ ಇದೆ
(4) ದೇಹವನ್ನು ಮೀರುವುದರ ಕುರಿತು ಇದೆ

106. ಸಾಂಸ್ಥಿಕ ಬರವಣಿಗೆಯಲ್ಲಿ (Institutional Writing) ಈ ಕೆಳಗಿನ ಯವುದು ಬರುವುದಿಲ್ಲ ?
(1) ಶ್ರದ್ಧಾಂಜಲಿ ಟಿಪ್ಪಣಿ
(2) ವಾಣಿಜ್ಯ ಪತ್ರ
(3) ಸ್ವ ವಿವರಗಳು
(4) ವಿಮರ್ಶೆ (Review)

107. ಭಾಷಾ ಗಳಿಕೆ ಮತ್ತು ಕಲಿಕೆಯಲ್ಲಿ ಅಂತಸ್ಥ ಊಹಾಸಿದ್ಧಾಂತ ಎಂದರೇನು ?
(1) ಇದು, ಎಲ್ಲಾ ಭಾಷೆಯ ವ್ಯಾಕರಣವನ್ನು ಒಳಗೊಂಡಿರುತ್ತದೆ ಮತ್ತು ಎಲ್ಲಾ ಮಕ್ಕಳು ತಮ್ಮದೇ ರೀತಿಯಲ್ಲಿ ಕಲಿಯುತ್ತಾರೆ ಎಂಬುದನ್ನು ನಿರಾಕರಿಸುತ್ತದೆ.
(2) ಇದು, ಎಲ್ಲಾ ಮನುಷ್ಯರು ಭೌತಿಕ ಶಿಸ್ತು ಮತ್ತು ಭಾಷೆಯ ವಾತಾವರಣಕ್ಕೆ ಒಗ್ಗಿಸುವುದರ ಮೂಲಕ ಭಾಷೆಯನ್ನು ಕಲಿಯುತ್ತಾರೆ ಎಂದು ನಂಬುತ್ತದೆ.
(3) ಇದು, ಹುಟ್ಟಿನಿಂದಲೇ ಎಲ್ಲಾ ಮನುಷ್ಯರು ಭಾಷಾ ಜ್ಞಾನವನ್ನು ಹೊಂದಿರುತ್ತಾರೆ ಎಂದು ನಂಬುತ್ತದೆ.
(4) ಅಭ್ಯಾಸವನ್ನು ರೂಢಿಸಿಕೊಳ್ಳುವುದರ ಫಲಿತಾಂಶವೇ ಭಾಷಾ ಕಲಿಕೆ ಎಂದು ನಂಬುತ್ತದೆ.

108. ವಿಷಯಾಭಿಮುಖಿ ಭಾಷಿಕ ನಿಯುಕ್ತಿ (Input) ಯು ಯಾವುದನ್ನು ಕುರಿತಂತೆ ಇದೆ ?
(1) ಭಾಷಾ ನಿಯುಕ್ತಿಯು (Language Input) ಭಾಷೆಯು ಹೇಗೆ ಬಳಸಲ್ಪಟ್ಟಿದೆ ಎಂಬುದನ್ನು ಕೇಂದ್ರಿಕರಿಸುತ್ತದೆ.
(2) ಭಾಷಿಕ ನಿಯುಕ್ತಿಯು ಅಭಿವ್ಯಕ್ತಿಯ ಮಂಡನೆ ಮತ್ತು ಅದರ ಪ್ರಕ್ರಿಯೆಯನ್ನು ಗಮನಿಸುತ್ತದೆ.
(3) ಮಾಹಿತಿಯನ್ನು ಕೇಂದ್ರೀಕರಿಸಿದ ಭಾಷಿಕ ನಿಯುಕ್ತಿ.
(4) ಶಬ್ದಕೋಶ, ಉಚ್ಚಾರಣೆ, ವ್ಯಾಕರಣ ಇತ್ಯಾದಿ.

109. ಭಾಷಾ ಕಲಿಕೆಯಲ್ಲಿ ಯಾವ ದೃಷ್ಟಿಕೋನವು ಪದ ಮತ್ತು ಪದದ ಭಾಗಗಳನ್ನು ಭಾಷಾ ಕಲಿಕೆಯ ಮೂಲಾಧಾರವೆಂದು ಸಮರ್ಥಿಸುತ್ತದೆ ?
(1) ಚಟುವಟಿಕೆಯನ್ನು ನೀಡಿ, ಅದರ ಮೂಲ ಭಾಷೆ ಕಲಿಸುವುದು
(2) ಸಂವಹನದ ದೃಷ್ಟಿಕೋನ
(3) ಶಾಬ್ದಿಕ ದೃಷ್ಟಿಕೋನ
(4) ವ್ಯಾಕರಣದ ಅನುವಾದ ವಿಧಾನ

110. ಈ ಕೆಳಗಿನವುಗಳಲ್ಲಿ ಯಾವುದು ಶಾಲಾ ಶಿಕ್ಷಣದಲ್ಲಿ ಬಹುಭಾಷಿಕತೆಯ ಗುರಿಯಾಗಿಲ್ಲ ?
(1) ವಿದ್ಯಾರ್ಥಿಗಳ ಭಾಷೆಯನ್ನೇ ಬಳಸಿಕೊಂಡು ಶಾಲೆಯಲ್ಲಿ ಬೋಧನೆ ಮತ್ತು ಕಲಿಕೆಯನ್ನು ಮಾಡುವುದು
(2) ಎಷ್ಟು ಸಾಧ್ಯವೋ ಅಲ್ಲಿಯವರೆಗೆ, ಮಾತೃಭಾಷೆಯನ್ನೇ ಕಲಿಕೆಯ ಭಾಷೆಯಾಗಿ ಹಾಗೂ ಭಾಷಾಮಾಧ್ಯಮವಾಗಿ ಬಳಸಿಕೊಳ್ಳುವುದು
(3) ತ್ರೀಭಾಷಾ ಸೂತ್ರದ ಅಡಿಯಲ್ಲಿ ಮಾತೃಭಾಷೆ, ಹಿಂದಿ ಮತ್ತು ಇಂಗ್ಲೀಷನ್ನು ಕಲಿಸುವುದು.
(4) ಎಲ್ಲಾ ಮಕ್ಕಳು ತಮ್ಮ ಮಾತೃಭಾಷೆಯಲ್ಲಿಯೇ ಶಾಲಾ ಶಿಕ್ಷಣವನ್ನು ಪ್ರಾರಂಭಿಸಿ, ಮುಂದೆ ಇನ್ನಷ್ಟು ಹೆಚ್ಚು ಬೇರೆ (ಕೊನೆಯಪಕ್ಷ ಎರಡು ಅಥವಾ ಅದಕ್ಕಿಂತ ಹೆಚ್ಚು) ಭಾಷೆಗಳನ್ನು ಕಲಿಯುವುದು.

111. ವಾಣಿಯು ಒಂದು ಲೇಖನದ ಸಾಮಾನ್ಯ ಮೇಲ್‌ಪದರದ ತಿಳಿವನ್ನು ಪಡೆದುಕೊಳ್ಳಲು ಓದುತ್ತಿದ್ದಾಳೆ. ಇವಳ ಓದಿನ ಬಗೆಯು ಏನೆಂದು ಕರೆಸಿಕೊಳ್ಳುತ್ತದೆ ?
(1) ಊಹಿಸುವುದು (Inferencing)
(2) ಸ್ಕ್ಯಾನಿಂಗ್
(3) ಸ್ಕಿಮಿಂಗ್
(4) ವಿಮರ್ಶಾತ್ಮಕ ಓದು

**112.** ಶಾಲಾ ಆಧಾರಿತ ಮೌಲ್ಯಾಂಕನದಲ್ಲಿ ಮುಂದುವರಿಸಲು ಸೂಕ್ತವಾದ ಎರಡು ಓದುವಿಕೆಯನ್ನು ಆಯ್ಕೆ ಮಾಡಿ.

(a) ಇದು, ಕಲಿಕಾರ್ಥಿಗಳು ಮತ್ತು ಬೋಧಕರು ಇಬ್ಬರಲ್ಲಿಯೂ ಸ್ವಾಯತ್ತತೆಯನ್ನು ಬೆಳೆಸಲು ಸಹಾಯ ಮಾಡುತ್ತದೆ.

(b) ಇದು, ಶಾಲೆಯು ತನ್ನದೇ ಆದದ್ದನ್ನು ಯೋಜಿಸಲು ಅವಕಾಶ ಮಾಡಿಕೊಡುತ್ತದೆ.

(c) ಇದು ಪರೀಕ್ಷಾ ಮಂಡಳಿಯ ಅಧಿಕಾರವನ್ನು ಹಿಂಪಡೆಯುತ್ತದೆ.

(d) ಇದು, ಮೌಲ್ಯಾಂಕನ ಯೋಜನೆಯಲ್ಲಿ ವಿದ್ಯಾರ್ಥಿಗಳ ಸಕ್ರೀಯ ಸಹಭಾಗಿತ್ವವನ್ನು ಒಳಗೊಳ್ಳುವುದಿಲ್ಲ.

(1) (a) ಮತ್ತು (b) (2) (b) ಮತ್ತು (c)

(3) (c) ಮತ್ತು (d) (4) (d) ಮತ್ತು (a)

**113.** ಈ ಕೆಳಗಿನವುಗಳಲ್ಲಿ ಯಾವ ಶಿಕ್ಷಣದ ತಾಂತ್ರಿಕತೆಯು ಪ್ರತಿಪಾದಿಸುತ್ತದೆ ?

ವಾಸ್ತವ ಲೋಕದ ಕಲಿಕಾ ವಾತಾವರಣ ಅಥವಾ ಘಟನೆಗಳನ್ನು ಆಧರಿಸಿದ ಕಲಿಕೆಯ ಬಳಕೆಯು ಈಗಾಗಲೇ ಪೂರ್ವ ನಿಯೋಜಿತ ಸೂಚನಾ ಸರಣಿಗೆ ಬದಲಾಗಿ ಬಳಸಲ್ಪಡುತ್ತದೆ.

(1) ಪ್ರಾದೇಶಿಕತೆ (2) ರಚನಾತ್ಮಕತೆ (3) ಭಾಷಾ ಶ್ರವಣ (4) ಜ್ಞಾನ

**114.** 6ನೇ ತರಗತಿಯ ರಾಹುಲ್ ತಾನು ಈಗಾಗಲೇ ಕಲಿತಿರುವುದರೊಡನೆ ಹೊಸ ವ್ಯಾಕರಣ ತತ್ವಗಳನ್ನು ಗುರುತಿಸುವುದನ್ನು ಕಲಿತಿದ್ದಾನೆ. ಈ ಕೆಳಗಿನವುಗಳಲ್ಲಿ ಯಾವ ತಂತ್ರವು ಇದರಲ್ಲಿದೆ ?

(1) ಸ್ವ–ಬೋಧನಾ ತಂತ್ರ (2) ತಿಳುವಳಿಕೆಯ ತಂತ್ರ

(3) ಸೂಕ್ಷ್ಮತಿಳುವಳಿಕೆಯ ತಂತ್ರ (4) ತಿಳುವಳಿಕೆ ಮತ್ತು ಸೂಕ್ಷ್ಮತಿಳುವಳಿಕೆ ಎರಡೂ ತಂತ್ರಗಳು

**115.** ಒಬ್ಬ ಅಧ್ಯಾಪಿಕೆಯು 7ನೇ ತರಗತಿಯಲ್ಲಿ ಏಳು ವಾಕ್ಯಗಳ ಒಂದು ಸಣ್ಣ ಪಠ್ಯವನ್ನು ಓದುತ್ತಾಳೆ. ನಂತರ, ಆಕೆಯು ವಿದ್ಯಾರ್ಥಿಗಳಿಗೆ ಇದನ್ನು ಎಚ್ಚರಿಕೆಯಿಂದ ಆಲಿಸಲು ಹೇಳಿ, ಮತ್ತು ಇದಕ್ಕೆ ಹತ್ತಿರವಾದ ಆದರೆ ಇದಕ್ಕಿಂತ ಭಿನ್ನವಾದ ಪಠ್ಯವನ್ನು ಸೃಷ್ಟಿಸಲು ಸೂಚಿಸುತ್ತಾಳೆ. ಇದರ ಹಿಂದಿನ ತಂತ್ರವನ್ನು ಏನೆಂದು ಹೇಳುತ್ತಾರೆ ?

(1) ಸ್ಕಿಮಾ ಸೃಷ್ಟಿ (2) ಕೆಳಮುಖ ತಂತ್ರ

(3) ಮೇಲ್ಮುಖ ತಂತ್ರ (4) ಪ್ಯಾರಾಗ್ರಾಫ್ ಉಕ್ತಲೇಖನ

**116.** ಈ ಕೆಳಗಿನವುಗಳಲ್ಲಿ ಯಾವುದು ಕಲಿಕಾ ಫಲಿತವನ್ನು ಕುರಿತಂತೆ ಸರಿಯಾದ ಗುರಿಯಾಗಿದೆ ?

(a) ವಸ್ತು ಕೇಂದ್ರಿತ ಕಲಿಕೆಯ ಬದಲಿಗೆ, ಸಾಮರ್ಥ್ಯ ಆಧಾರಿತ ಕಲಿಕೆಯನ್ನು ಬೆಳೆಸುವುದು.

(b) ಸೃಜನಶೀಲವಾಗಿ ಭಾಷೆಯನ್ನು ಬಳಸಲು ಸಾಧ್ಯವಾಗುವಂತೆ ಅಗತ್ಯವಾದ ಭಾಷಾಕೌಶಲ್ಯಗಳನ್ನು ಕರಗತ ಮಾಡಿಸುವುದು.

(c) ವಸ್ತುವಿನಲ್ಲಿ ಪ್ರಾವೀಣ್ಯತೆ ಗಳಿಸಿ, ನಂತರ ಅದನ್ನು ಅನ್ವಯಿಸುವುದು.

(d) ತಮ್ಮ ನಿರ್ದಿಷ್ಟ ಉದ್ದೇಶಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳು ತಮ್ಮ ಭಾಷೆ ಬಳಸುವಂತೆ ಸಾಧ್ಯವಾಗಿಸುವುದು.

(1) (c) ಮಾತ್ರ ಸರಿ (2) (b) ಮತ್ತು (c) ಎರಡೂ ಸರಿ

(3) (d) ಮತ್ತು (c) ಎರಡೂ ಸರಿ (4) (a) ಮತ್ತು (d) ಎರಡೂ ಸರಿ

117. ಈ ಕೆಳಗಿನವುಗಳಲ್ಲಿ ಯಾವ ಹೇಳಿಕೆಯು ವ್ಯಾಕರಣ ಕಲಿಕೆಯ ಸಂದರ್ಭದಲ್ಲಿ ಬಳಸುವ 'ಕಾರ್ಯವಿಧಾನ ಜ್ಞಾನ' (Procedural Knowledge) ವನ್ನು ಕುರಿತಂತೆ ಅತ್ಯುತ್ತಮವಾಗಿ ವಿವರಿಸಲ್ಪಟ್ಟಿದೆ ?

(1) ರಚನೆಯನ್ನು ತಿಳಿಯುವುದು.

(2) ವ್ಯಾಕರಣದ ರೂಪವೇನು ಎಂಬುದನ್ನು ಮತ್ತು ಅದರ ಬಳಕೆಯನ್ನು ಅರಿಯುವುದು.

(3) ವ್ಯಾಕರಣದ ನಿಯಮಗಳನ್ನು ಕಲಿತು ನಂತರ ಅದನ್ನು ಮತ್ತೆ ಬಳಕೆಗೆ ತರುವುದು.

(4) ವ್ಯಾಕರಣದ ಪುಸ್ತಕದಿಂದ ವ್ಯಾಕರಣದ ರೂಪವನ್ನು ಅರ್ಥಮಾಡಿಕೊಳ್ಳುವುದು.

118. ಸರ್ಕಾರಿ ಪ್ರೌಢಶಾಲೆಯ ಇಂಗ್ಲೀಷ್ ಅಧ್ಯಾಪಕಳಾದ ಶ್ರೀಮತಿ ಉಷಾರಾಣಿಯು ತನ್ನ ವಿದ್ಯಾರ್ಥಿಗಳು ದಿನನಿತ್ಯದ ಉದ್ದೇಶಗಳನ್ನು ಪೂರೈಸಿಕೊಳ್ಳುವ ದಿಸೆಯಲ್ಲಿ ಇಂಗ್ಲೀಷ್ ಭಾಷೆಯನ್ನು ಕಲಿಯುವಂತೆ ಮಾಡುತ್ತಾಳೆ ಮತ್ತು ಇದರ ಮೂಲಕ ಭಾಷೆಯ ನಿಯಮಗಳನ್ನು ಕಲಿಸುತ್ತಾಳೆ. ಇವಳು ತನ್ನ ವಿದ್ಯಾರ್ಥಿಗಳಲ್ಲಿ ಏನನ್ನು ಬೆಳೆಸಲು ಪ್ರಯತ್ನಿಸುತ್ತಿದ್ದಾಳೆ ?

(1) ಸಂವಹನ ಕೌಶಲ್ಯ

(2) ವ್ಯಕ್ತಿಗಳ ನಡುವಣ ಕೌಶಲ್ಯ

(3) ಶೈಕ್ಷಣಿಕವಾಗಿ ಭಾಷಾ ಪ್ರಾವೀಣ್ಯತೆಯ ಜ್ಞಾನ

(4) ವ್ಯಕ್ತಿಗಳ ನಡುವಣ ಕೌಶಲ್ಯದ ಮೂಲಭೂತ ಗುಣಗಳು

119. ಒಬ್ಬ ಶಿಕ್ಷಕಿಯು 7ನೇ ತರಗತಿಯ ವಿದ್ಯಾರ್ಥಿಗಳ ತಪ್ಪುಗಳ ಒಂದು ಖಚಿತ ಮಾದರಿಯನ್ನು ಸಂಗ್ರಹಿಸಿ, ತಿಂಗಳಿಗೊಮ್ಮೆ ತರಗತಿಯಲ್ಲಿ ವಿದ್ಯಾರ್ಥಿಗಳು ತಮ್ಮ ತಪ್ಪನ್ನು ಅರಿಯಲು ಚರ್ಚೆ ಮಾಡುತ್ತಾಳೆ. ಆಕೆಯು ಈ ತಪ್ಪುಗಳನ್ನು ಯಾರು ಮಾಡಿದ್ದು ಎಂದು ಹೇಳುವುದಿಲ್ಲ, ಆಕೆ ತನ್ನ ವಿದ್ಯಾರ್ಥಿಗಳಿಗೆ ತಮ್ಮ ತಪ್ಪನ್ನು ಗುರುತಿಸಿಕೊಳ್ಳಲು ಹೇಳುತ್ತಾಳೆ. ಈ ಅಭ್ಯಾಸವನ್ನು ಏನೆಂದು ಕರೆಯಲಾಗುತ್ತದೆ ?

(1) ಅಧ್ಯಯನ ಮತ್ತು ವ್ಯಾಕರಣದಲ್ಲಿ ತೊಡಗಿಸಿಕೊಳ್ಳುವಿಕೆ

(2) ವ್ಯಾಕರಣ ಬೋಧನೆ

(3) ಫೀಡ್‌ಬ್ಯಾಕ್ ಒದಗಿಸುವಿಕೆ

(4) ತಪ್ಪುಗಳ ವಿಶ್ಲೇಷಣೆ

120. ನಾವು ಕೇಳುವ ಅಥವಾ ನೋಡುವ ಪದಗಳನ್ನು ಗುರುತಿಸುವುದನ್ನು ಹೀಗೆಂದು ಕರೆಯುತ್ತಾರೆ :

(1) ಶಬ್ದಕೋಶ (Lexis)

(2) ಉತ್ಪಾದನಾ ಶಬ್ದ

(3) ಗ್ರಹಿಕಾ ಶಬ್ದ

(4) ಶಬ್ದಗಳ ತೊಡಗುವಿಕೆ (Engaging Vocabulary)

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–II** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–V** ರಲ್ಲಿರುವ ಪ್ರಶ್ನೆಗಳನ್ನು (**ಪ್ರಶ್ನೆ ಸಂಖ್ಯೆ 121-150**) ಉತ್ತರಿಸಬೇಕು.

Candidates should attempt the questions from **Part-V (Q.No. 121-150)**, if they have opted **KANNADA** as **Language-II** only.

Prepp
Your Personal Exams Guide

## PART-V

## LANGUAGE-II

## KANNADA

| |
|---|
| ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–II** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–V** ರಲ್ಲಿರುವ ಪ್ರಶ್ನೆಗಳನ್ನು (**ಪ್ರಶ್ನೆ ಸಂಖ್ಯೆ** 121-150) ಉತ್ತರಿಸಬೇಕು. |

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 121-128) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

"ವಾಸೂ ನಿನ್ನೆ ನೀನು ಬೆಣ್ಣೆ ಕದ್ದಿದ್ದು ಹೇಳಲೇನು ?"

ಕೆಮ್ಮಣ್ಣು ಬಳಿದಿದ್ದ ಗೋಡೆಗೆ ಒರಗಿ ಮಣೆಯ ಮೇಲೆ ಕೂತು, ನೆಲದ ಮೇಲೆ ಬಾಳೆಯ ಎಲೆಯಲ್ಲಿದ್ದ ಉಪ್ಪಿಟ್ಟನ್ನು ಅನನ್ಯ ಮನಸ್ಕನಾಗಿ ಮುಕ್ಕುತ್ತಿದ್ದ ವಾಸು ಬೆಚ್ಚಿ ತಲೆಯೆತ್ತಿ ನೋಡಿದನು. ಕಡೆಗೋಲು ಕಂಬವು ಅವನನ್ನೇ ದುರುದುರು ನೋಡಿ ಮುಗುಳುನಗುವಂತಿತ್ತು ! ವಾಸುವಿಗೆ ದಿಗಿಲಾಯಿತು, ಯಾರು ನೋಡಿದ್ದರು ತಾನು ಬೆಣ್ಣೆ ಕದ್ದುದನ್ನು ಎಂದು ! ತನಗೆ ಕೇಳಿಸಿದ್ದ ಧ್ವನಿ ತೀರಿಕೊಂಡ ಅಜ್ಜಮ್ಮನ ಧ್ವನಿಯಂತಿತ್ತು. ಅಜ್ಜಮ್ಮನೇ ಕಡೆಗೋಲು ಕಂಬದಲ್ಲಿ ಅಡಗಿಕೊಂಡು ಮಾತಾಡಿದರೆಂದು ಭಾವಿಸಿ ಮನಸ್ಸಿನಲ್ಲಿಯೇ "ಅಜ್ಜಮ್ಮ, ನಿನ್ನ ದಮ್ಮಯ್ಯ ! ಹೇಳಬೇಡ ! ಚಿಕ್ಕಮ್ಮ ಇಲ್ಲೆ ನಿಂತಿದೆ, ಎಂದು ಮತ್ತೆ ಉಪ್ಪಿಟ್ಟು ಮುಕ್ಕಲು ತೊಡಗಿದನು. ಉಪ್ಪಿಟ್ಟು ಕೆನ್ನೆ, ಗಲ್ಲ, ಮೂಗು ಎಲ್ಲವನ್ನು ಆವರಿಸಿತು.

ಸ್ವಲ್ಪ ದೂರದಲ್ಲಿ ತರಕಾರಿ ಹೆಚ್ಚುತ್ತ ಕುಳಿತಿದ್ದ ನಾಗಮ್ಮನವರು, ತಾವು ಮೆಲ್ಲಗೆ ಕೇಳಿದ ಪ್ರಶ್ನೆಗೆ ವಾಸು ಬೆಚ್ಚಿದುದನ್ನು ಕಂಡು ಮುಗುಳುನಕ್ಕು ಕನಿಕರದಿಂದ ಸುಮ್ಮನಾದರು. ಅಣ್ಣಂದಿರಂತೆಯೆ ಕ್ರಾಪು ಬಿಡುತ್ತೇನೆಂದು ಅವನ ತಲೆಯಲ್ಲಿ ಕೂದಲು ಜುಟ್ಟಿಗೂ ಕ್ರಾಪಿಗೂ ಮಧ್ಯಸ್ಥವಾಗಿ ಕಾಂತಿಯಾದಂತಿತ್ತು. ಆ ಕೇಶಪಾಶಗಳಲ್ಲಿ ಒಂದು ಪಟಾಲಂ ಅವನ ಎಡಗಡೆಯ ನುಣ್ಗದಪು ಮತ್ತು ಕಿವಿಗಳನ್ನು, ಜೇನುಹುಟ್ಟಿಯನ್ನು ಹೆಜ್ಜೆನು ಹುಳುಗಳು ಮುತ್ತುವಂತೆ ಮುತ್ತಿದ್ದುವು. ಗುಂಡಿಗಳೆಲ್ಲಾ ಗಡಿಪಾರಾಗಿದ್ದ ಅವನ ಷರಟು 'ಆ' ಎಂದು ಬಾಯ್ದೆರೆದುಕೊಂಡು ಬೀದಿಯ ಹುಚ್ಚನಂತೆ ಅಸ್ತವ್ಯಸ್ತವಾಗಿತ್ತು. ಅದರ ಮೇಲಿದ್ದ ಕೊಳೆಯ ಭಾರವು ಒಂದು ಘಟ್ಟಿ ಸಾಬೂನಿಗೆ ಬೆವರು ಕೀಳಿಸುವಂತಿತ್ತು. ಅವನುಟ್ಟಿದ್ದ ಅಡ್ಡಪಂಚೆಯೂ ಷರಟಿನ ಸಂಗಾತಿಯಾಗುವುದಕ್ಕೆ ಯೋಗ್ಯವಾಗಿಯೆ ಇತ್ತು. ನಾಗಮ್ಮನವರಿಗೆ ಅವನನ್ನು ಕಂಡು ಮುದ್ದು ಸೂಸಿತು. ತರಕಾರಿಯನ್ನು ಕೈಯಲ್ಲಿಯೆ ಹಿಡಿದು ಅವನನ್ನೇ ನೋಡತೊಡಗಿದರು.

ವಾಸು ಎಲೆಯ ಮೇಲಿದ್ದ ಉಪ್ಪಿಟ್ಟನ್ನು ಪೂರೈಸಿ "ಚಿಕ್ಕಮ್ಮಾ, ಮತ್ತಿಷ್ಟು ಉಪ್ಪಿಟ್ಟು !" ಎಂದನು.

ಸುಬ್ಬಮ್ಮ ಸಿಡುಕಿನಿಂದ "ಏನು ಹೊಟ್ಟೇನೋ ನಿನ್ದು ? ಉಪ್ಪಿಟ್ಟಿಲ್ಲ !" ಎಂದು ಸೌಟಿನಿಂದ ಗಡಿಗೆಯಲ್ಲಿ ಬೇಯುತ್ತಿದ್ದ ಪದಾರ್ಥವನ್ನು ತಿವಿದು ತಿರುವ ತೊಡಗಿದಳು.

ವಾಸು ಹತಾಶನಾಗಿ ಹನಿಗಣ್ಣಾಗಿ ತನ್ನೆದುರು ನೆಲದ ಕಡೆಗೆ ನೋಡಿದನು. ಆಗತಾನೆ ಬಿಸಿಲು ಕಿಟಕಿಯ ಸರಳುಗಳನ್ನು ದಾಟಿ ಬಂದು ಪಟ್ಟೆ ಪಟ್ಟೆಯಾಗಿ ಬಿದ್ದಿತು. ಹಾಗೆಯೇ ಕಿಟಕಿಯ ಕಡೆಗೆ ನೋಡಿದನು. ಹೊರಗಡೆ ಹೊಂಬಿಸಿಲು ಹಲಸಿನ ಮರದ ತಳಿರಿನ ಮೇಲೆ ನಲಿದಾಡುತ್ತಿತ್ತು. ದೂರದ ಕಾಡುಮರಗಳ ಹಸುರು ಅವನನ್ನು ಕರೆಯುವಂತೆ ತೋರಿತು. ಅಷ್ಟರಲ್ಲಿ ಕಾಡಿನಿಂದ ಒಂದು ಈಡಿನ ಸದ್ದೂ ಕೇಳಿಸಿತು. ಅಂದು ಅವನು ಮಾಡಬೇಕಾಗಿದ್ದ ಸಾಹಸ ಕರ್ತವ್ಯಗಳೆಲ್ಲ ನೆನಪಿಗೆ ಬಂದುವು. ಹೂವಣ್ಣಯ್ಯ ರಾಮಣ್ಣಯ್ಯ ಬರುತ್ತಾರೆ. ಅವರಿಗೆ ಕಲ್ಲು ಸಂಪಗೆ ಹಣ್ಣು, ಬೆಮ್ಮಾರಲ ಹಣ್ಣು ತರಬೇಕು. ತಾನು ಹಿಂದಿನ ದಿನ ಒಡ್ಡಿದ್ದ ಉರುಳಿನಲ್ಲಿ ಹಕ್ಕಿ ಸಿಕ್ಕಿಬಿದ್ದಿದೆಯೋ ಏನೋ ನೋಡಬೇಕು.

121. ಹೊಂಬಿಸಿಲು – ಈ ಪದದಲ್ಲಿನ ಸಮಾಸ :

(1) ಕರ್ಮಧಾರಯ (2) ದ್ವಿಗು (3) ತತ್ಪುರುಷ (4) ಬಹುವ್ರಿಹಿ

Prepp
Your Personal Exams Guide

**122.** ವಾಸು ಷರಟು ಹೇಗಿತ್ತು ?

(1) ಗುಂಡಿ ಹರಿದು ಬಾಯಿತೆರೆದು ಹುಚ್ಚನಂತೆ

(2) ಗುಂಡಿ ತೆರೆದು ಬಾಯಿಹರಿದು ಹುಚ್ಚನಂತೆ

(3) ಅಸ್ತವ್ಯಸ್ತ

(4) ಗುಂಡಿ ಬಿಚ್ಚಿ ಹೋಗಿತ್ತು

**123.** ಬೆಣ್ಣೆ ಕದ್ದೀದಿಯಾ ? ಎಂಬ ಧ್ವನಿ ವಾಸುಗೆ ಹೇಗೆ ಕೇಳಿಸಿತು ?

(1) ಸತ್ತ ಅಜ್ಜಿಯ ಧ್ವನಿಯಂತೆ

(2) ಕಡೆಗೋಲು ಕಂಬದ ಧ್ವನಿಯಂತೆ

(3) ದೆವ್ವದ ಧ್ವನಿಯಂತೆ

(4) ಭ್ರಮಾತ್ಮಕವಾದ ಸುಳ್ಳು ಧ್ವನಿಯಂತೆ

**124.** 'ನಣ್ಗದಪು' – ಈ ಪದದ ಅರ್ಥ :

(1) ಸುಂದರ ಹೆಜ್ಜೆ (2) ನವಿರಾದ ಕೆನ್ನೆ (3) ಪ್ರೀತಿಯ ಹೆಜ್ಜೆ (4) ಒಳ್ಳೆಯ ಆಭರಣ

**125.** 'ಹನಿಗಣ್ಣು' – ಈ ಪದದಲ್ಲಿ ಇರುವ ಸಂಧಿ :

(1) ಸವರ್ಣದೀರ್ಘ ಸಂಧಿ

(2) ಲೋಪ ಸಂಧಿ

(3) ಆಗಮ ಸಂಧಿ

(4) ಆದೇಶ ಸಂಧಿ

**126.** 'ಈಡಿನ ಸದ್ದು' – ಅಂದರೆ ಏನು ?

(1) ಏಟಿನ ಸದ್ದು

(2) ಬಲೆಯ ಸದ್ದು

(3) ಗುಂಡಿನ ಸದ್ದು

(4) ಬೇಟೆಯ ಸದ್ದು

**127.** 'ತಳಿರು' – ಈ ಪದದ ಅರ್ಥ :

(1) ಹೂವು (2) ಚಿಗುರು (3) ನವಿರಾದ ಹೂವು (4) ಎಲೆ

**128.** ಕೊಳೆಯ ಭಾಗ ಒಂದು ಸಾಬೂನಿಗೆ ಬೆವರು ಕೀಳಿಸುವಂತೆ ಇತ್ತು.

ಈ ವಾಕ್ಯದ ಅರ್ಥ :

(1) ಸಾಬೂನು ಶುದ್ಧಗೊಳಿಸಲು ಹೆಚ್ಚು ಇರಲಿಲ್ಲ.

(2) ಕೊಳೆಯು ಸ್ವಲ್ಪ ಇದ್ದುದರಿಂದ ಸಾಬೂನು ಬೇಕಾಗಿರಲಿಲ್ಲ

(3) ಕೊಳೆಯ ಭಾಗ ಅತೀ ಹೆಚ್ಚಾಗಿತ್ತು

(4) ಕೊಳೆಯು ತೀವ್ರವಾಗಿ ಹೋಗುವಂತೆ ಇತ್ತು

Prepp
Your Personal Exams Guide

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 129-135) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಶಂಕರರಾಯರ ಹಿತ್ತಲು ಪಟೇಲರ ಹಿತ್ತಲುಗಳನ್ನು ದಾಟಿ, ಮಸಕುಮಸಕಾದ ಹಳದಿ ಬಣ್ಣದ ಬೆಳಕನ್ನು ತೂರುವ ಕಾಚಿನ ಬುರುಡೆಯ ದೀಪ ತೂಗುತ್ತಿದ್ದ ಏಕನಾಥ ಶೆಟ್ಟಿಯ ಅಂಗಡಿಗೆ ಬರುವುದರೊಳಗೆ ಗುಡುಗಿನ ದೊಡ್ಡ ಸದ್ದೂ ಕೇಳಿಸಿದಾಗ, ನಡಿಗೆಯ ವೇಗವನ್ನು ತುಸು ಹೆಚ್ಚಿಸಿ, ಮೊಮ್ಮಗಳ ಮನೆಯ ಕಡೆ ಹೊರಳುವ ಓಣಿಯ ಬಾಯಲ್ಲಿ ನಿಂತ ನರಸಿಂಹನ ಅಂಗಡಿಗೆ ಬರುವಷ್ಟರಲ್ಲಿ ಉಬ್ಬಸ ಹತ್ತಿದಂತಾಗಿ ತಡೆದು. ಅಂಗಡಿಯತ್ತ ನೋಡುತ್ತ ಅಂಗಡಿಯಲ್ಲಿ ದೀಪವಿಲ್ಲದ್ದನ್ನು ಕಂಡು ಇದು ಹೇಗೆ ಎಂದುಕೊಂಡು ಕಣ್ಣರಳಿಸಿ, ಹುಡುಗ ಇವತ್ತು ಅಂಗಡಿಯನ್ನು ಇಷ್ಟು ಬೇಗ ಹೇಗೆ ಮುಚ್ಚಿದ ? ಎಂದೂ ಹೀಗೆ ಮಾಡಿದವನಲ್ಲ ಎಂದು ಕ್ಷಣ ಹೊತ್ತು ಅಸ್ವಸ್ಥಗೊಂಡು. ಓಣಿಯಲ್ಲಿ ಕಾಲಿರಿಸುವ ಹೊತ್ತಿಗೆ ಎರಡೂ ಬದಿಯ ಹಿತ್ತಲುಗಳಲ್ಲಿ ದಟ್ಟವಾಗಿ ಬೆಳೆದು ನಿಂತ ಎತ್ತರವಾದ ಮರಗಳಿಂದಾಗಿ, ಆಕಾಶದಲ್ಲಿ ಕವಿದ ಮೋಡಗಳಿಂದಾಗಿ, ಓಣಿಯತ್ತ ಮುತ್ತಿನಂತ ಕತ್ತಲೆಯಲ್ಲಿ ಏನೇನೂ ಕಾಣಿಸದಂತಾಗಿ, ದಾರಿ ತಪ್ಪಿದೆವೋ ಎಂದುಕೊಳ್ಳುವಷ್ಟರಲ್ಲಿ 'ಸಳ್' ಎಂದು ಮಿಂಚಿದ ಸಿಡಿಲಿನ ಧಾರೆ ಹಾವಿನಂತೆ ಬಳುಕಿ, ಹೆಡೆ ಬಿಚ್ಚಿ ಕಣ್ಣು ಕುಕ್ಕಿಸುವ ಬೆಳಕನ್ನು ಕೆಳಗೆ ತನ್ನಂತೆಯೇ ಅಂಕುಡೊಂಕಾಗಿ ಹರಿದ ಚಿರಪರಿಚಿತವಾದ ದಾರಿಯ ಮೇಲೆ ಕ್ಷಣಕಾಲ ಚೆಲ್ಲಿ ಕಣ್ಣು ಮುಚ್ಚಿತು. ದೂರ ಮನವೇಲನ ದಣಪೆಯ ಇದಿರು, ಗದ್ದೆಗೆ ಗೊಬ್ಬರ ಸಾಗಿಸಲು ಉಪಯೋಗಿಸುತ್ತಿದ್ದ ಹರಕು ಮುರಕು ಚಕ್ಕಡಿಯೊಂದು ದಿಕ್ಕಿಲ್ಲದೆ ಬಿದ್ದಿತ್ತು. ಅದಕ್ಕೂ ಮುಂದೆ, ಉತ್ತುಮಿಯ ಹಿತ್ತಿಲ ದಣಪೆಯೊಳಗಿಂದ ಹೊರಬಿದ್ದ ಕರ್‍ಗಿನ ನಾಯಿಯೊಂದು ಮಿಂಚಿಗೆ ಹೆದರಿ, ಬಾಲವನ್ನು ಕುಂಡೆಯಲ್ಲಿ ಸಿಕ್ಕಿಸಿ, ಪರಮೇಶ್ವರಿಯ ಮನೆಯತ್ತ ಓಡುತ್ತಿದ್ದುದೂ ಕಣ್ಣಿಗೆ ಬಿತ್ತು. ಅದಕ್ಕೂ ಆಚೆ, ಕೈತಾನನ ಮನೆಯವರೆಗೂ ಕ್ಷಣಕಾಲ ಕಾಣಿಸಿಕೊಂಡು ಮತ್ತೆ ಕತ್ತಲೆಯಲ್ಲಡಗಿ, ಹೊಂಚುಹಾಕಿದ ಹಾಗೆ ತೆಪ್ಪಗೆ ಬಿದ್ದ ಸೀರಾದ ಓಣಿಯಲ್ಲಿ ಇನ್ನೊಂದು ನರಪ್ರಾಣಿ ಇರಲಿಲ್ಲ. ಬುಡಣಸಾಬರ ಮೈಮೇಲೆ ಮುಳ್ಳು ನಿಂತವು. ಎಂದೋ ಯಾವಾಗಲೋ ಸತ್ತುಹೋದ ಗೆಳೆಯರು, ಮಕ್ಕಳು, ಹಿರಿಯರು ಯಾರು ಯಾರೆಲ್ಲ ನೆನಪಿಗೆ ಬಂದು ತಲ್ಲಣಗೊಂಡು ಅಧೀರ ಹೆಜ್ಜೆ ಇಡುತ್ತ ಮನವೇಲನ ಹಿತ್ತಲ ದಣಪೆ ತಲುಪುವುದರೊಳಗೆ, ಬೆನ್ನ ಹಿಂದುಗಡೆಯಲ್ಲಿ ಯಾರೊ 'ಅಲಲ ಲಲಲ ಕೀಇ ಹಾ' ಎಂದು ಒಳಗಿನ ಹುರುಪಿಗಿಂತ ಹೆಚ್ಚಾಗಿ ಕತ್ತಲೆಯಲ್ಲಿ ಹೋಗುವಾಗ ಪಟ್ಟ ಭೀತಿಯನ್ನು ಕಳೆದುಕೊಳ್ಳಲೆಂಬಂತೆ ಒದರುತ್ತ ಓಡೋಡುತ್ತ ಬರುವ ಹೆಜ್ಜೆಯ ಸಪ್ಪಳ ಕೇಳಿ, ತಡೆದಾಗ, ಕತ್ತಲೆಯಲ್ಲಿ ಅವರನ್ನು ಸಮೀಪಿಸುತ್ತಿದ್ದವನು, "ಇದೇ ! ಬುಡಣಸಾಬರೋ ನೋಡ್ತೆ. ದೂರದಿಂದ ಯಾರೆಂದು ತಿಳಿಯದೆ ಎದೆಯಲ್ಲಿ ಧಸ್ ಆಯ್ತು ನೋಡಿ. ಇನ್ನೂ ಇಲ್ಲೇ ಇದ್ದೀರಲ್ಲ. ಪೇಟೆಯಲ್ಲಿ ನಿಮ್ಮನ್ನು ಯಾವಾಗ ನೋಡಿದ್ದೆ. ನಾನು ನಾಗೇಶ, ಪರಶುರಾಮಭಟ್ಟರ ಮಗ. ನರಸಿಂಹ ಆಡಲಿಕ್ಕೆ ಬಾ ಎಂದು ಹೇಳಿಕಳುಹಿಸಿದ್ದ. ಹಾಗೆಂದೇ ಹೋರಟೆ, ಬೇಗ ಬೇಗ ಹೆಜ್ಜೆ ಹಾಕಿ. ನಿಮ್ಮ ಹತ್ತಿರ ಕೊಡೆಯೂ ಇಲ್ಲ." ಎಂದು ಒಂದೇ ಉಸಿರಿನಲ್ಲಿ ಅಂದವನೇ ಮುದುಕನ ಮಾತಿನ ದಾರಿ ಕಾಯದೇ, ಅವಸರ ಅವಸರವಾಗಿ ಅಲ್ಲಿಂದ ನಡೆದೇಬಿಟ್ಟ ಅವನು ಕಾಣದಾದದ್ದೇ ಓಣಿಯಲ್ಲಿಯ ಕತ್ತಲೆ ಒಮ್ಮೆಲೇ ದಟ್ಟವಾದಂತೆ ಎಲ್ಲವೂ ನಿಶ್ಯಬ್ದವಾದಂತೆ ಭಾಸವಾಗಿ, ಬುಡಣಸಾಬರ ಮೈ 'ಶಿರ್' ಎಂದು, ತಿರುಗಿ ನವಿರಿಗೊಳಗಾದಾಗ ತಾವೇ ದಿಗಿಲುಪಟ್ಟು ಎಲ್ಲ ಬಿಟ್ಟು ಇಸ್ಪೀಟಿನ ತಲಬಿಗೆ ಅಂಗಡಿಯನ್ನು ಇಷ್ಟು ಬೇಗ ಮುಚ್ಚಿದನೋ ಎಂದು ಕಳವಳಿಸುತ್ತ ಮನವೇಲನ ದಣಪೆ ದಾಟುತ್ತಿದ್ದಾಗ, ಮನೆಯ ಜಗುಲಿಯ ಮೇಲೆ ಕಂದೀಲಿನ ಬೆಳಕನ್ನು ನೋಡಿ ಅಷ್ಟರಲ್ಲೇ ಸಮಾಧಾನಪಟ್ಟು ಇಲ್ಲೆಲ್ಲೋ ಚಕ್ಕಡಿ ಇದ್ದುದು ನೆನಪಿಗೆ ಬಂದು, ಅದಕ್ಕೆ ಎಡವಬಾರದೆಂಬಂತೆ ಬದಿಗೆ ಸರಿದು, ಬೆತ್ತವೂರಿ ತಡವುತ್ತ ಉತ್ತುಮಿಯ ಹಿತ್ತಲನ್ನು ಕಳೆಯುವಷ್ಟರಲ್ಲಿ ಹಿಂದಿನಿಂದ ಯಾರೋ 'ರಾಜ ರಾಜನು ಬಂದಾsss' ಎಂದು ಹುರುಪಿನಿಂದ ರಾಗ ಎಳೆದು ಬಂದರು.

**129.** ಇಡೀ ಗದ್ಯಭಾಗದಲ್ಲಿ ವರ್ಣಿಸಲಾದ ವಿಷಯ :

(1) ಮಿಂಚು (2) ಕತ್ತಲೆ (3) ಮಳೆ (4) ಭಯ

**130.** 'ಸಿಡಿಲಿನ ಧಾರೆ' – ಹೇಗೆ ಕಂಡಿದೆ ?

(1) ಜೋರಾದ ಶಬ್ದದ ಹಾಗೆ
(2) ಹಾವಿನಂತೆ ಬಳುಕಿದ ಮಿಂಚಿನಂತೆ
(3) ಕೊರೆಯುವ ಮಳೆಯ ಮಿಂಚು
(4) ಬೆಳಕಿಲ್ಲದ ಸಂದರ್ಭದ ಬೆಳಕು

**131.** 'ಬುರುಡೆದೀಪ' ಅಂದರೆ ಏನು ?

(1) ಗಾಜಿನ ಚಿಮಣಿ ದೀಪ
(2) ಸುಳ್ಳು ದೀಪ
(3) ಬೆಳಕು ಕೊಡುವ ದೀಪ
(4) ಎತ್ತರದಲ್ಲಿ ಇಟ್ಟ ದೀಪ

Prepp
Your Personal Exams Guide

**132.** 'ಮೈ ಮೇಲೆ ಮುಳ್ಳು ನಿಲ್ಲು' – ಇಲ್ಲಿ ಈ ನುಡಿಗಟ್ಟಿನ ಅರ್ಥ :

(1) ಅಳು ಬರುವುದು (2) ಉತ್ಸಾಹಬರು

(3) ರೋಮಾಂಚನವಾಗು (4) ಭಯವಾಗು

**133.** 'ತಲಬು' – ಈ ಪದದ ಅರ್ಥ :

(1) ನೂಕು (2) ತಬ್ಬು (3) ನಿಲ್ಲು (4) ಚಟ

**134.** 'ಬಾಲವನ್ನು ಕುಂಡೆಯಲ್ಲಿ ಸಿಕ್ಕಿಸಿ' – ಈ ನುಡಿಭಾಗದ ಅರ್ಥ :

(1) ಮಳೆಯಿಂದ ತಪ್ಪಿಸಿಕೊಂಡು (2) ಸಿಟ್ಟಿನಿಂದ

(3) ಹೆದರಿಕೊಂಡು (4) ರಕ್ಷಿಸಿಕೊಂಡು

**135.** 'ಹುರುಪು' – ಈ ಪದದ ಅರ್ಥ :

(1) ಉತ್ಸಾಹ (2) ಕೆರೆತ (3) ಛಳಿ (4) ಊದುವುದು

**136.** ಒಬ್ಬ ಶಿಕ್ಷಕಿಯು ತನ್ನ 8ನೇ ತರಗತಿಯ ವಿದ್ಯಾರ್ಥಿಗಳಿಗೆ ಈ ಕೆಳಗಿನ ನಿಯೋಜಿತ ಕಾರ್ಯವನ್ನು ನೀಡುತ್ತಾಳೆ. ಈ ಬರವಣಿಗೆಯನ್ನು ಯಾವ ಬಗೆಯದ್ದು ಎಂದು ವರ್ಣಿಸಬಹುದು ?

ಜೊತೆಯಲ್ಲಿನ ವಿದ್ಯಾರ್ಥಿಗಳ ಬುದ್ಧಿ ಪ್ರಚೋದಿಸುವ, ಆಲೋಚನೆಗಳನ್ನು ಗುರುತಿಸುವ ಮತ್ತು ಇವುಗಳನ್ನು ಒಂದು ಒಳ್ಳೆಯ ಬರವಣಿಗೆಯಾಗಿ ಬೆಳೆಸಲು ಎರಡು ಪರವಾದ ಮತ್ತು ಎರಡು ವಿರುದ್ಧವಾದ ವಾದಗಳನ್ನು ವಿಷಯದ ಮೇಲೆ ಬರೆಸುತ್ತಾರೆ. ಇದಕ್ಕಾಗಿ ಪ್ರಿಂಟ್ ಮಾಡಿದ ಪುಸ್ತಕಗಳ ಅಗತ್ಯವಿರುವುದಿಲ್ಲ.

(1) ವೈಯಕ್ತಿಕ ಬರವಣಿಗೆ (2) ವಿವರಣಾತ್ಮಕ ಬರವಣಿಗೆ

(3) ತಾರ್ಕಿಕ ಬರವಣಿಗೆ (4) ವರ್ಣನಾತ್ಮಕ ಬರವಣಿಗೆ

**137.** ಈ ಕೆಳಗಿನವುಗಳಲ್ಲಿ ಯಾವುದು ಭಾಷಾಗಳಿಕೆ ಮತ್ತು ಕಲಿಕೆಯಲ್ಲಿ ಅಂತಸ್ಥ ಊಹಾಸಿದ್ಧಾಂತದ ಪ್ರಮೇಯಕ್ಕೆ ಸರಿಯಾದುದಾಗಿದೆ ?

(1) ಭಾಷಾಗಳಿಕೆಯಲ್ಲಿ ಮಗುವಿನ ಪೋಷಕರು, ಜೊತೆಗಾರರು, ಮತ್ತು ಹತ್ತಿರದಲ್ಲಿರುವವರು ಹಾಗೂ ಸುತ್ತಲಿನ ಪರಿಸರವು ಜವಾಬ್ದಾರಿಯಾಗಿರುತ್ತದೆ.

(2) ಭಾಷೆಯು ಮಾನವರಿಗೆ ಮಾತ್ರವೇ ವಿಶಿಷ್ಟವಾದುದು ಮತ್ತು ಮನುಷ್ಯರು ಮಾತ್ರವೇ ಭಾಷೆಯನ್ನು ಮಾತನಾಡಬಲ್ಲರು.

(3) ಭಾಷಿಕ ಘಟಕವು ಮಕ್ಕಳಲ್ಲಿ ವರದತ್ತವಾಗಿರುತ್ತದೆ ಮತ್ತು ಗಂಭೀರವಾದ ಅಭ್ಯಾಸ ಮತ್ತು ಶಿಸ್ತಿನ ಮೂಲಕ ತಮ್ಮದಾಗಿಸಿಕೊಳ್ಳುತ್ತಾರೆ.

(4) ಮಕ್ಕಳಲ್ಲಿ ಸಂಪನ್ನಗೊಂಡಿರುವ ಭಾಷಿಕ ಘಟಕವು ಭಾಷೆಯ ಉತ್ಪಾದನೆ ಮತ್ತು ಗಳಿಕೆಗೆ ಜವಾಬ್ದಾರವಾಗಿರುತ್ತದೆ.

Prepp
Your Personal Exams Guide

**138.** ಈ ಕೆಳಗಿನವುಗಳಲ್ಲಿ ಯಾವುದು ಬಾಟಮ್–ಅಪ್ ಆಲಿಸುವಿಕೆಯ ಚಟುವಟಿಕೆ ?

(1) ಉಕ್ತಲೇಖನ, ಸೂಕ್ಷ್ಮ ಆಲಿಸುವಿಕೆ, ಬಹು ಆಯ್ಕೆಯ ಪ್ರಶ್ನೆಗಳ ಬಳಕೆ, ಸಕರಾತ್ಮಕ ಮತ್ತು ನಕಾರಾತ್ಮಕ ಹೇಳಿಕೆಗಳನ್ನು ಗುರುತಿಸುವುದು.

(2) ಸಾರಾಂಶ ಸಂಗ್ರಹಣೆ, ಪೂರ್ಣವಾಗಿ ಸಂದೇಶವನ್ನು ಆಲಿಸಿ ಅದನ್ನು ಹಿನ್ನೆಲೆಯ ಜ್ಞಾನದೊಂದಿಗೆ ಅನ್ವಯಿಸುವುದು.

(3) ಆಲಿಸುತ್ತಿರುವಂತೆಯೇ ಅಸ್ತವ್ಯಸ್ತವಾಗಿರುವ ಪದಗಳನ್ನು ಜೋಡಿಸಿಕೊಂಡು ವಾಕ್ಯ ಮಾಡುವುದು.

(4) ಪದ್ಯದ ಕಂಠಪಾಠ, ಆಶುಭಾಷಣ, ಚರ್ಚಾಸ್ಪರ್ಧೆ ಮತ್ತು ಸಂವಾದ.

**139.** ಭಾಷಾ ಕಲಿಕೆಯಲ್ಲಿ 'ಶಿಕ್ಷಣಶಾಸ್ತ್ರದ ಸಾಮಗ್ರಿಗಳ ಗುರುತಿಸುವಿಕೆ' ಎಂದರೇನು ?

(1) ಭಾಷಾ ಶಿಕ್ಷಣಶಾಸ್ತ್ರವನ್ನು ಮುಂದಕ್ಕೆ ಒಯ್ಯಲು ಚಟುವಟಿಕೆಗಳು ಮತ್ತು ಕೆಲಸಗಳನ್ನು ಒಂದಕ್ಕೊಂದು ಬೆಸೆಯುವುದು.

(2) ಶಿಕ್ಷಕರು ಶಿಕ್ಷಣಶಾಸ್ತ್ರವನ್ನು ಸಾಮಗ್ರಿಗಳೊಡನೆ ಬೆಸೆದುಕೊಂಡು, ತಮಗೆ ಬೇಕಾದಂತೆ ಶಿಕ್ಷಣಶಾಸ್ತ್ರವನ್ನು ಹೊಂದಿಸಿಕೊಳ್ಳುತ್ತಾರೆ.

(3) ಶಿಕ್ಷಕಿಯು ತನ್ನ ತರಗತಿಯಲ್ಲಿ ಶಿಕ್ಷಣಶಾಸ್ತ್ರವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವಿಕೆ.

(4) ತರಗತಿಯಲ್ಲಿ ಬಳಸುವ ವಿವಿಧ ಬಗೆಯ ಶಿಕ್ಷಣಶಾಸ್ತ್ರದ ತಂತ್ರಗಳನ್ನು ಪಟ್ಟಿಮಾಡುವುದು.

**140.** 'ಎಲ್ಲಾ ಕಲಿಕಾರ್ಥಿಗಳು ತಮ್ಮ ಮಾತೃಭಾಷೆಯಲ್ಲಿ ಶಾಲಾ ಶಿಕ್ಷಣವನ್ನು ಆರಂಭಿಸಿ, ನಂತರ ಅದಕ್ಕೆ ಇನ್ನಷ್ಟು ಹೆಚ್ಚಿನ ಭಾಷೆಗಳನ್ನು ಸೇರಿಸಿಕೊಳ್ಳುವ ಕಡೆಗೆ ಚಲಿಸುತ್ತಾರೆ'.

ಶಿಕ್ಷಣ ನೀತಿಯಲ್ಲಿ ಭಾಷೆಯನ್ನು ಕುರಿತಂತೆ ಏನೆಂದು ಹೇಳಲಾಗುತ್ತದೆ ?

(1) ಶಿಕ್ಷಣ ನೀತಿಯಲ್ಲಿ ಭಾಷೆಯು ಸಂಸ್ಕೃತಿ ಆಧಾರಿತ

(2) ಶಾಲಾ ಶಿಕ್ಷಣಕ್ಕೆ ತ್ರಿ ಭಾಷಾ ಸೂತ್ರ

(3) ಭಾಷಾ ಶಿಕ್ಷಣಕ್ಕೆ ಮಾತೃಭಾಷೆಯ ಮೂಲ

(4) ಬಹುಭಾಷಿಕತ್ವವು ಮಾತೃಭಾಷೆ ಆಧಾರಿತ

**141.** ಸಂಧ್ಯಾಳು ಯಂತ್ರ ಕಲಿಕೆಯ ಬಗ್ಗೆ ಮಾಹಿತಿಯನ್ನು ಪಡೆಯಲು ಓದುತ್ತಿದ್ದಾಳೆ. ಅವಳ ಓದುವಿಕೆಯನ್ನು ಏನೆಂದು ಗುರುತಿಸಬಹುದು ?

(1) ಗಮನಿಸುವುದು (Glancing)
(2) ಪುನರಾವಲೋಕನ (Reviewing)
(3) ಮೇಲ್ ಪದರದ ಓದು (Skimming)
(4) ಎಚ್ಚರಿಕೆಯ ಸೂಕ್ಷ್ಮ ಓದು (Scanning)

Prepp
Your Personal Exams Guide

**142.** ಈ ಕೆಳಗಿನ ಕ್ರಿಯೆಗಳನ್ನು ಏನೆಂದು ಹೇಳಲಾಗುತ್ತದೆ ?

ಒಂದು ಸಣ್ಣ ಪಠ್ಯವನ್ನು ಎರಡು ವಿಭಿನ್ನ ಭಾಗವಾಗಿಸಲಾಗುತ್ತದೆ ಅಥವಾ ಪ್ರತಿ ವಾಕ್ಯಕ್ಕೂ ಇನ್ನೊಂದು ಪರ್ಯಾಯ ವಾಕ್ಯವನ್ನು ಜೊತೆಯಾಗಿಸಿ ಪ್ರತಿಯೊಬ್ಬ ವಿದ್ಯಾರ್ಥಿಯು ಉಕ್ತಲೇಖಿಸುತ್ತಾನೆ ಮತ್ತು ಇನ್ನೊಬ್ಬ ವಿದ್ಯಾರ್ಥಿಯು ಬರೆಯುತ್ತಾನೆ. ಈ ಪ್ರಕ್ರಿಯೆಯನ್ನು ಪುನರಾವರ್ತಿಸಿ ಇನ್ನೊಬ್ಬ ವ್ಯಕ್ತಿಯು ಆಲಿಸಿ ಬರೆಯುವಂತೆ ಮಾಡಿ, ನಂತರ ಇಬ್ಬರೂ ಒಟ್ಟಿಗೆ ಇಡೀ ಪಠ್ಯವನ್ನು ಪೂರ್ಣಗೊಳಿಸುತ್ತಾರೆ.

(1) ಅಂತರ್ ಸೃಷ್ಟಿ (Transcreation)
(2) ಪರಿಚ್ಛೇದ (Paragraph) ಉಕ್ತಲೇಖನ
(3) ಪರಸ್ಪರ ಉಕ್ತಲೇಖನ
(4) ವ್ಯಾಕರಣ ಉಕ್ತಲೇಖನ

**143.** "ಕಲಿಕೆಯು ಅರ್ಥದ ಹುಡುಕಾಟವಾಗಿದೆ ಇದರಿಂದ ತನ್ನ ಸುತ್ತಲಿನ ಸಂಗತಿಗಳ ಅರ್ಥ ಶೋಧದ ಕಡೆಗೆ ಪ್ರಯತ್ನಪೂರ್ವಕವಾಗಿ ಸಕ್ರಿಯವಾಗಿ ಹೊರಟಾಗ ಕಲಿಕೆ ಪ್ರಾರಂಭವಾಗುತ್ತದೆ."

ಈ ಮೇಲಿನ ಚಿಂತನೆಯನ್ನು ಯಾವ ಶಿಕ್ಷಣದ ತಾತ್ವಿಕತೆಯು ಸಮರ್ಥಿಸುತ್ತದೆ ?

(1) ವರ್ತನಾಶಾಸ್ತ್ರ
(2) ರಚನಾತ್ಮಕ (Constructivism)
(3) ಬಹುಮುಖ ಪ್ರತಿಭೆ
(4) ಸಂರಚನಾವಾದ (Structuralism)

**144.** ರೂಪಾಭಿಮುಖ (form oriented) ಭಾಷಿಕ ನಿಯುಕ್ತಿಗಳು ಏನನ್ನು ಕುರಿತದ್ದಾಗಿವೆ ?

(1) ಭಾಷಾ ಕಲಿಕೆಗಾಗಿ ಭಾಷಿಕ ನಿಯುಕ್ತಿಗಳನ್ನು ಅರ್ಥೈಸುವುದು
(2) ಶಬ್ದಕೋಶದ ಬಳಕೆ, ಉಚ್ಚಾರಣೆ ಮತ್ತು ವ್ಯಾಕರಣ
(3) ಮಾಹಿತಿಯ ಮೇಲೆ ಕೇಂದ್ರೀಕೃತಗೊಳ್ಳುವ ನಿಯುಕ್ತಿಗಳು (Inputs)
(4) ಬರವಣಿಗೆಯನ್ನು ಕಲಿಯಲು ಬೇಕಾಗುವ ಪ್ರಚ್ಛನ್ನ ನಿಯುಕ್ತಿಗಳು

**145.** ಈ ಕೆಳಗಿನವುಗಳಲ್ಲಿ ಯಾವುದು ಕಲಿಕೆಯ ಮೌಲ್ಯಾಂಕನ ?

(1) ಬೋಧನೆ–ಕಲಿಕೆಯ ಪ್ರಕ್ರಿಯೆಯಲ್ಲಿಯೇ ವಿದ್ಯಾರ್ಥಿಗಳನ್ನು ಗಮನಿಸುವುದು ಮತ್ತು ತಿದ್ದುವಂತೆ ಮೌಲ್ಯಾಂಕನವನ್ನು ರೂಪಿಸುವುದು.
(2) ವಿದ್ಯಾರ್ಥಿಗಳ ಪ್ರಗತಿಯನ್ನು ವರ್ಷದ ಕೊನೆಯಲ್ಲಿ ಗಮನಿಸಿ ಅವರನ್ನು ಮುಂದಿನ ತರಗತಿಗೆ ಪರಿಗಣಿಸಲು ಮೌಲ್ಯಾಂಕನವನ್ನು ರೂಪಿಸುವುದು.
(3) ಒಂದು ನಿಗದಿತ ಹಂತದಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ಸರಿ–ತಪ್ಪುಗಳಿಗೆ ಒಳಪಡಿಸಲು ಮೌಲ್ಯಾಂಕನವನ್ನು ರಾಜ್ಯದ ಹಂತದಲ್ಲಿ ಮಾಡುವುದು.
(4) ಪ್ರತೀ ಒಂದು ಅವಧಿಯ (Term) ಕೊನೆಯಲ್ಲಿ ವಿದ್ಯಾರ್ಥಿಗಳ ಪ್ರಗತಿಯ ಮೌಲ್ಯಾಂಕನವನ್ನು ಮಾಡುವಂತೆ ರೂಪಿಸುವುದು.

**146.** ಉತ್ಪಾದನಾ ಶಬ್ದಕೋಶ ಎಂದರೇನು ?

(1) ಬರವಣಿಗೆ ಮತ್ತು ಮಾತಿನಲ್ಲಿ ನಾವು ಬಳಸುವ ಪದಗಳು
(2) ನಾವು ಕೇಳದೊಡನೆಯೆ ಗುರುತಿಸುವ ಪದಗಳು
(3) ಪದಗಳನ್ನು ಗುರುತಿಸುವಲ್ಲಿ ನಾವು ಸೋಲುವುದು
(4) ಕೇಳುವಾಗ್ಗೆ ಕೆಲವೊಮ್ಮೆ ನೆನಪಿಸಿಕೊಳ್ಳುವ ಪದಗಳು

**147.** ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದನ್ನು ನೀವು ಬೋಧನೆಗೆ ಸಂಬಂಧಿಸಿದಂತೆ ಅನುಮೋದಿಸುವುದಿಲ್ಲ ?

(1) ವಿದ್ಯಾರ್ಥಿಗಳ ಕಲ್ಪನಾ ಶಕ್ತಿಯನ್ನು ರೂಪಿಸಲು ಕವಿತೆಯ ಅಭ್ಯಾಸ ಇದೆ.

(2) ಭಾಷೆಯೊಡನೆ ಕೆಲಸ ಮಾಡಲು ಕವಿತೆ ಇದೆ.

(3) ಸಂತೋಷಕ್ಕಾಗಿ ಕವಿತೆ ಇದೆ.

(4) ವ್ಯಾಕರಣವನ್ನು ಬೋಧಿಸಲು ಕವಿತೆ ಇದೆ.

**148.** ವಿಭಿನ್ನವಾದ ಕ್ಷೇತ್ರಗಳ ವಿಷಯಗಳನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಪ್ರಸ್ತುತ ಪಡಿಸುವಾಗ ಹಾಗೂ ಅವರೊಡನೆ ಸಂವಾದ ನಡೆಸುವಾಗ ಭಾಷಿಕ ಬಳಕೆಯು ಅದಕ್ಕೆ ತಕ್ಕಂತೆ ಇರುತ್ತದೆ. ಈ ಭಾಷಿಕ ಕೌಶಲ್ಯವನ್ನು ಏನೆಂದು ಗುರುತಿಸಲಾಗುತ್ತದೆ ?

(1) ವ್ಯಕ್ತಿಗಳ ನಡುವಿನ ಮೂಲಭೂತ ಸಂವಹನ ಕೌಶಲ್ಯ

(2) ವಾಸ್ತವ ಬದುಕಿನ ಉದ್ದೇಶಕ್ಕೆ ಅನುಗುಣವಾದ ಭಾಷೆ

(3) ಭಾಷಿಕ ಬಳಕೆಯ ಸಂದರ್ಭಗಳು (Language Register)

(4) ಜ್ಞಾನದ ಶೈಕ್ಷಣಿಕ ಭಾಷೆಯ ಪ್ರಾವೀಣ್ಯತೆ

**149.** ಈ ಕೆಳಗಿನ ಯಾವ ವಿಧವಾದ ಹೇಳಿಕೆಯು ವ್ಯಾಕರಣದ ತಿಳುವಳಿಕೆಯನ್ನು ಕುರಿತ ಅರ್ಥೈಸುತ್ತದೆ ?

ರೂಪದ ಬಗ್ಗೆ ತಿಳುವಳಿಕೆ, ಅದನ್ನು ವರ್ಣಿಸುವುದು ಮತ್ತು ಒಂದು ಮಿತವಾದ ಬಳಕೆಯಲ್ಲಿ ಅನ್ವಯಿಸುವುದು.

(1) ಸಾಮರ್ಥ್ಯ (2) ಸೂಕ್ಷ್ಮ ತಿಳುವಳಿಕೆಯ ಜ್ಞಾನ

(3) ಕಾರ್ಯ ವಿಧಾನದ ತಿಳುವಳಿಕೆ (4) ಘೋಷಿತ ತಿಳುವಳಿಕೆ

**150.** ಈ ಕೆಳಗಿನ ಕಾರ್ಯ ಚಟುವಟಿಕೆಯು ಯಾವುದನ್ನು ಒಳಗೊಂಡಿದೆ ?

ವಿದ್ಯಾರ್ಥಿಗಳಿಗೆ ಹೋಟೆಲ್ ಮೆನುವನ್ನು ಕೊಟ್ಟು ಅವರು ನಾಲ್ಕು ಜನರಿಗೆ 1800 ರೂ.ಗಳಲ್ಲಿ ಊಟವನ್ನು ಕೊಡಲು ಆದೇಶಿಸಬೇಕಾಗಿದೆ. ಇದರಲ್ಲಿ ಒಬ್ಬರು ಸಸ್ಯಹಾರಿ, ಇನ್ನೊಬ್ಬರು ಅಣಬೆಗೆ ಅಲರ್ಜಿಯುಳ್ಳವರು. ನಂತರ ಅವರು ಮನೆಗೆ ಹಿಂತಿರುಗಲು ಆಟೊಗಾಗಿ 70 ರೂ. ಗಳನ್ನು ಇಟ್ಟುಕೊಳ್ಳಬೇಕಾಗಿದೆ. ವಿದ್ಯಾರ್ಥಿಗಳು ಊಟಕ್ಕಾಗಿ ಯಾವುದನ್ನು ಆದೇಶ ಮಾಡುತ್ತಾರೆ, ಜನರ ಅಗತ್ಯಗಳೇನು ಮತ್ತು ಹಾಸ್ಟೆಲ್ ಗೆ ಹಿಂದಿರುಗಲು ಹಣವನ್ನು ಉಳಿಸಿ ಇಟ್ಟುಕೊಳ್ಳಬೇಕಾಗಿದೆ.

(1) ಉನ್ನತ ಮಟ್ಟದ ಆಲೋಚನಾ ಕಾಳಜಿ

(2) ಅಧ್ಯಯನ–ನಿರತ ಆತ್ಮಶೋಧನ–ಬಳಕೆ (ಭಾಷೆ)

(3) ಜ್ಞಾನದ ತಂತ್ರಗಳು (Cognitive Skills)

(4) ವರ್ತಮಾನ–ಬಳಕೆಯ–ಉತ್ಪಾದನೆ (ಭಾಷೆ)

- o 0 o -

Prepp
Your Personal Exams Guide

SPACE FOR ROUGH WORK

Prepp Your Personal Exam Guide

Prepp
Your Personal Exams Guide

**ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :**

1. ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಾದ ವಿಧಾನವನ್ನು ಕೊಡಲಾಗಿರುವ ಪ್ರಶ್ನೆಪತ್ರಿಕೆಯಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ, ಉತ್ತರಿಸುವ ಮುನ್ನ ಸೂಚನೆಗಳನ್ನು ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳಬೇಕು.
2. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ **ಪುಟ–2** ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ **ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್** ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
3. OMR ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು OMR ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
4. ಪ್ರಶ್ನೆ ಪತ್ರಿಕೆ ಮತ್ತು OMR ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು OMR ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತುಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
5. ಪ್ರಶ್ನೆ ಪತ್ರಿಕೆ/ OMR ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
6. OMR ಉತ್ತರಪತ್ರಿಕೆಯಲ್ಲಿ ಸಂಕೇತಿಸಿದ ಮಾಹಿತಿಗಳನ್ನು ಗಣಕಯಂತ್ರವು ಓದುತ್ತದೆ. ಆದ್ದರಿಂದ ಯಾವುದೇ ಮಾಹಿತಿಗಳನ್ನು ಅಪೂರ್ಣಗೊಳಿಸಕೂಡದು ಮತ್ತು ಪ್ರವೇಶಪತ್ರದಲ್ಲಿರುವ ಮಾಹಿತಿಗೆ ಅದು ಭಿನ್ನವಾಗಬಾರದು.
7. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ ಚೀಟಿಗಳು, ಪೇಜರ್, ಮೊಬೈಲ್ ಫೋನು, ಇಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
8. ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್, ವೈರ್‌ಲೆಸ್ ಸಂಪರ್ಕ ಉಪಕರಣಗಳನ್ನು ಮತ್ತಿತರ ನಿಷೇಧಿತ ವಸ್ತುಗಳನ್ನು ತರಬಾರದು, ಇದನ್ನು ಮೀರಿ ನಡೆದಲ್ಲಿ ಅಥವಾ ಉಲ್ಲಂಘಿಸಿದರೆ ಆ ಅಭ್ಯರ್ಥಿಗಳು ಶಿಕ್ಷಾರ್ಹರಾಗುತ್ತಾರೆ ಮತ್ತು ಅವರನ್ನು ಪರೀಕ್ಷೆಯಿಂದ ಹೊರಹಾಕಲೂಬಹುದು.
9. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್‌ನ್ನು ನಿರೀಕ್ಷಕರಿಗೆ ತೋರಿಸಬೇಕು.
10. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
11. ಕಾರ್ಯನಿರತ ನಿರೀಕ್ಷಕರಿಗೆ ತನ್ನ OMR ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರಿ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್‌ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, OMR ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು. **ಪರೀಕ್ಷಾರ್ಥಿಗಳು ತಮ್ಮ ಎಡಗೈಯ ಹೆಬ್ಬೆಟ್ಟಿನ ಗುರುತನ್ನು ಹಾಜರಿ ಪತ್ರದಲ್ಲಿ ಕೊಟ್ಟಿರುವ ಸ್ಥಳದಲ್ಲಿ ಹಾಕಬೇಕು.**
12. ಇಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (Calculator) ಉಪಯೋಗ ನಿಷೇಧಿಸಲಾಗಿದೆ.
13. ಪರೀಕ್ಷಾ ಹಾಲ್‌ನಲ್ಲಿ, ಪರೀಕ್ಷಾರ್ಥಿ ಬೋರ್ಡ್‌ನ ಎಲ್ಲಾ ನೀತಿ–ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್‌ನ ನೀತಿ–ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
14. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು OMR ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
15. **ಪರೀಕ್ಷೆ ಮುಗಿದ ನಂತರ, ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ OMR ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.**

Prepp
Your Personal Exams Guide

## निम्नलिखित निर्देशों को ध्यान से पढ़ें :

1. जिस प्रकार से विभिन्न प्रश्नों के उत्तर दिए जाने हैं उसका वर्णन परीक्षा पुस्तिका में किया गया है, जिसे आप प्रश्नों का उत्तर देने से पहले ध्यान से पढ़ लें।
2. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर पत्र के **पृष्ठ-2** पर केवल एक वृत्त को ही पूरी तरह **नीले/काले बॉल पॉइन्ट पेन** से भरें। एक बार उत्तर अंकित करने के बाद उसे बदला नहीं जा सकता है।
3. परीक्षार्थी सुनिश्चित करें कि इस OMR उत्तर पत्र को मोड़ा न जाए एवं उस पर कोई अन्य निशान न लगाएँ। परीक्षार्थी अपना अनुक्रमांक OMR उत्तर-पत्र में निर्धारित स्थान के अतिरिक्त अन्यत्र न लिखें।
4. परीक्षा पुस्तिका एवं OMR उत्तर पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं OMR उत्तर पत्र के कोड या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी।
5. परीक्षा पुस्तिका/OMR उत्तर पत्र में दिए गए परीक्षा पुस्तिका कोड व संख्या को परीक्षार्थी सही तरीके से उपस्थिति-पत्र में लिखें।
6. OMR उत्तर पत्र में कोडित जानकारी को एक मशीन पढ़ेगी। इसलिए कोई भी सूचना अधूरी न छोड़ें और यह प्रवेश-पत्र में दी गई सूचना से भिन्न नहीं होनी चाहिए।
7. परीक्षार्थी द्वारा परीक्षा हॉल/कक्ष में प्रवेश-पत्र के सिवाय किसी प्रकार की पाठ्य-सामग्री, मुद्रित या हस्तलिखित, कागज़ की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है।
8. मोबाइल फोन, बेतार संचार युक्तियाँ (स्विच ऑफ अवस्था में भी) और अन्य प्रतिबंधित वस्तुएँ परीक्षा हॉल/कक्ष में नहीं लाई जानी चाहिए। इस सूचना का पालन न होने पर इसे परीक्षा में अनुचित साधनों का प्रयोग माना जाएगा और परीक्षार्थी के विरुद्ध कार्यवाही की जाएगी, परीक्षा रद्द करने सहित।
9. पूछे जाने पर प्रत्येक परीक्षार्थी, निरीक्षक को अपना प्रवेश-पत्र दिखाएँ।
10. केन्द्र अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें।
11. कार्यरत निरीक्षक को अपना OMR उत्तर पत्र दिए बिना एवं उपस्थिति-पत्र पर दुबारा हस्ताक्षर किए बिना परीक्षार्थी परीक्षा हॉल/कक्ष नहीं छोड़ेंगे। यदि किसी परीक्षार्थी ने दूसरी बार उपस्थिति-पत्र पर हस्ताक्षर नहीं किए, तो यह माना जाएगा कि उसने OMR उत्तर पत्र नहीं लौटाया है और यह अनुचित साधन का मामला माना जाएगा। **परीक्षार्थी अपने बाएँ हाथ के अंगूठे का निशान उपस्थिति-पत्र में दिए गए स्थान पर अवश्य लगाएँ।**
12. इलेक्ट्रॉनिक/हस्तचालित परिकलक का उपयोग वर्जित है।
13. परीक्षा हॉल/कक्ष में आचरण के लिए परीक्षार्थी परीक्षण संस्था के सभी नियमों एवं विनियमों द्वारा नियमित हैं। अनुचित साधनों के सभी मामलों का फैसला परीक्षण संस्था के नियमों एवं विनियमों के अनुसार होगा।
14. किसी भी परिस्थिति में परीक्षा पुस्तिका और OMR उत्तर पत्र का कोई भाग अलग न करें।
15. **परीक्षा सम्पन्न होने पर, परीक्षार्थी हॉल/कक्ष छोड़ने से पूर्व OMR उत्तर पत्र निरीक्षक को अवश्य सौंप दें।** ***परीक्षार्थी अपने साथ इस परीक्षा पुस्तिका को ले जा सकते हैं।***

## READ THE FOLLOWING INSTRUCTIONS CAREFULLY :

1. The manner in which the different questions are to be answered has been explained in the Test Booklet which you should read carefully before actually answering the questions.
2. Out of the four alternatives for each question, only one circle for the correct answer is to be darkened completely with **Blue / Black Ball Point Pen** on **Side-2** of the OMR Answer Sheet. The answer once marked is not liable to be changed.
3. The candidates should ensure that the OMR Answer Sheet is not folded. Do not make any stray marks on the OMR Answer Sheet. Do not write your Roll No. anywhere else except in the specified space in the OMR Answer Sheet.
4. Handle the Test Booklet and OMR Answer Sheet with care, as under no circumstances (except for discrepancy in Test Booklet Code or Number and OMR Answer Sheet Code or Number), another set will be provided.
5. The candidates will write the correct Test Booklet Code and Number as given in the Test Booklet/OMR Answer Sheet in the Attendance Sheet.
6. A machine will read the coded information in the OMR Answer Sheet. Hence, no information should be left incomplete and it should not be different from the information given in the Admit Card.
7. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the examination hall/room.
8. Mobile phones, wireless communication devices (even in switched off mode) and the other banned items should not be brought in the examination halls/rooms. Failing to comply with this instruction, it will be considered as using unfair means in the examination and action will be taken against the candidate including cancellation of examination.
9. Each candidate must show on demand his/her Admit Card to the Invigilator.
10. No candidate, without special permission of the Centre Superintendent or Invigilator, should leave his/her seat.
11. The candidates should not leave the Examination Hall/Room without handing over their OMR Answer Sheet to the Invigilator on duty and sign the Attendance Sheet twice. Cases where candidate has not signed the Attendance Sheet second time will be deemed not to have handed over the OMR Answer Sheet and dealt with as an unfair means case. **The candidates are also required to put their left hand THUMB impression in the space provided in the Attendance Sheet.**
12. Use of Electronic/Manual Calculator is prohibited.
13. The candidates are governed by all Rules and Regulations of the Examining Body with regard to their conduct in the Examination Hall/Room. All cases of unfair means will be dealt with as per Rules and Regulations of the Examining Body.
14. No part of the Test Booklet and OMR Answer Sheet shall be detached under any circumstances.
15. **On completion of the test, the candidate must hand over the OMR Answer Sheet to the Invigilator in the Hall / Room.** ***The candidates are allowed to take away this Test Booklet with them.***